
ಐ.ಸಿ.ಎಸ್.ಎಫ್ ಕೈಪಿಡಿ



# ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಕಿರು ಪರಿಚಯ

ICSF


ಮೀನು ಕಾರ್ಮಿಕರ ಬೆಂಬಲಕ್ಕಾಗಿ
ಅಂತರಾಷ್ಟ್ರೀಯ ಒಕ್ಕೂಟ
www.icsf.net

ಐ.ಸಿ.ಎಸ್.ಎಫ್ ಕೈಪಿಡಿ





# ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಕಿರು ಪರಿಚಯ



ಮೀನು ಕಾರ್ಮಿಕರ ಬೆಂಬಲಕ್ಕಾಗಿ
ಅಂತಾರಾಷ್ಟ್ರೀಯ ಒಕ್ಕೂಟ

www.icsf.net

**ಐ.ಸಿ.ಎಸ್.ಎಫ್. ಕೈಪಿಡಿ**

**"ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ ೨೦೦೭"**

**ಅರ್ಥೈಸಿ/ತಿಳಿದುಕೊಳ್ಳುವುದು**

**ಪ್ರಕಾಶಕರು**

**ಮೀನು ಕಾರ್ಮಿಕರ ಬೆಂಬಲಕ್ಕಾಗಿ ಅಂತಾರಾಷ್ಟ್ರೀಯ ಒಕ್ಕೂಟ**

**೨೭, ಕಾಲೇಜು ರೋಡ್, ಚೆನ್ನೈ – ೬೦೦೦೦೬, ಭಾರತ**

**ದೂರವಾಣಿ : (೯೧)೪೪–೨೮೨೭ ೫೩೦೩**

**ಫಾಕ್ಸ್: (೯೧)೪೪–೨೮೨೫ ೪೪೫೭**

**ಇ–ಮೇಲ್ : icsf@icsf.net**

**ರೇಖಾ ಚಿತ್ರಗಳು**

**ಸಂದೇಶ್ : sandeshcartoonist@gmail.com**

**ಐ.ಎಸ್.ಬಿ.ಎನ್ : 978-93-80802-13-8**

ಇಂಟರ್‌ನೇಶನಲ್ ಕಲೆಕ್ಟಿವ್ ಇನ್ ಸಪೋರ್ಟ್ ಆಫ್ ಫಿಶ್ ವರ್ಕರ್ಸ್ ( I.C.S.F.) ಗೈಡ್ ಬುಕ್

(ಮೀನು ಕಾರ್ಮಿಕರ ಬೆಂಬಲಕ್ಕಾಗಿ ಅಂತಾರಾಷ್ಟ್ರೀಯ ಒಕ್ಕೂಟ ಇದರ ಕೈಪಿಡಿ)

# "ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ 2007"

# ಅರ್ಥೈಸಿ/ತಿಳಿದುಕೊಳ್ಳುವುದು

ಇದರ ಕಿರು ಪರಿಚಯ

# ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ – 2007

ಈ ಕೈಪಿಡಿಯು ಜೂನ್ 2007ರಲ್ಲಿ ಜೆನೇವಾ, ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ILO) 96ನೆಯ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ (ILC) ಅಂಗೀಕೃತವಾದ "ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007" ರ ಒಂದು ಕ್ಷಿಪ್ರ ಮೇಲ್ನೋಟವನ್ನು ಒದಗಿಸಲು ಪ್ರಯತ್ನಿಸಿದೆ. ಇದು ಒಡಂಬಡಿಕೆಯ ಯಾವುದೇ ವ್ಯವಸ್ಥೆಗಳ ನಿರ್ವಚನಗಳ ಆಶಯಗಳನ್ನು ಒದಗಿಸುವುದಿಲ್ಲ ಹಾಗೂ ಅದರಲ್ಲಿನ ವಾಸ್ತವಿಕ ವ್ಯವಸ್ಥೆಗಳ ಪರ್ಯಾಯವೆಂದು ಪರಿಗಣಿಸ ತಕ್ಕದಲ್ಲ. ಈ ಕೈಪಿಡಿಯು ಒಡಂಬಡಿಕೆ ಹಾಗೂ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಇಂಟರ್ ನೇಶನಲ್ ಲೇಬರ್ ಆರ್ಗನೈಷೇಶನ್–ಐ.ಎಲ್. ಒ.) ಮತ್ತು ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (ಇಂಟರ್ ನೇಶನಲ್ ಲೇಬರ್ ಕಾನ್ಫರೆನ್ಸ್ ಐ.ಎಲ್. ಸಿ.) ಗಳ ಕಾರ್ಯವೈಖರಿಯ ಪರಿಚಯವಿಲ್ಲದವರಿಗೆ ಸಹಾಯ ಮಾಡುವ ಮತ್ತು ತನ್ಮೂಲಕ ಅದಕ್ಕೆ ಸಂಬಂಧಿಸಿದ ಪ್ರಮುಖ ವಿಚಾರಗಳ ಅರಿವು ಮೂಡಿಸುವ ಧ್ಯೇಯ ಹೊಂದಿದೆ. ವಿಶೇಷವಾಗಿ, ಈ ಕೈಪಿಡಿಯು ಮುಂದುವರಿಯುತ್ತಿರುವ ದೇಶಗಳಲ್ಲಿನ ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆಗೆ ಒಡಂಬಡಿಕೆಯಿಂದ ಉಂಟಾಗಬಹುದಾದ ಪ್ರಯೋಜನಗಳು ಮತ್ತು ಸೂಚನೆಗಳನ್ನು ಮೀನು ಕಾರ್ಮಿಕರು ಮತ್ತು ಅದರ ಸಂಘಟನೆಗಳು ಅರ್ಥೈಸಿಕೊಳ್ಳಲು ನೆರವಾಗುವುದಾಗಿ ಹಾರೈಸಿದೆ.



## ಪರಿವಿಡಿ

1. ಪೀಠಿಕೆ 1

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ – 2007 **ಎಂದರೇನು?**

2. ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಇಂಟರ್ ನ್ಯಾಶನಲ್ ಲೇಬರ್ ಆರ್ಗನೈಷೇಶನ್– ಐ.ಎಲ್. ಒ.) 2

* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆ ಎಂದರೇನು?
* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆ ಏನು ಮಾಡುತ್ತದೆ?
* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ಆಡಳಿತ ವಿನ್ಯಾಸ ಏನು?
* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ತ್ರಿಪಕ್ಷೀಯ ಚೌಕಟ್ಟು ಏನು?
* ಕಾರ್ಮಿಕರ ಸ್ಥಿತಿ ಸುಧಾರಿಸಲು ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ಬಳಿ ಇರುವ ಸಲಕರಣೆಗಳೇನು?
* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಒಡಂಬಡಿಕೆ ಅಥವಾ ಶಿಫಾರಸ್ಸುಗಳನ್ನು ಅಂಗೀಕರಿಸುವುದು ಹೇಗೆ?

3. ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆ ಮತ್ತು ಮೀನುಗಾರಿಕೆ ವಲಯ 6

* ಮೀನುಗಾರಿಕೆ ವಲಯದಲ್ಲಿ ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ಒಳಗೊಳ್ಳುವಿಕೆ ಏನು?
* ಮೀನುಗಾರಿಕೆಗೆ ಹೊಸ ಕಾರ್ಮಿಕ ಮಟ್ಟವನ್ನು ಅಭಿವೃದ್ಧಿ ಪಡಿಸಲು ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಏನು ಮಾಡಿದೆ?

4. ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ – 2007 8

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007, ರ ವಿಶೇಷ ಮಹತ್ವ ಏನು?
* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಡಿ ಪ್ರಮುಖ ಅಗತ್ಯತೆಗಳೇನು?
* ಈ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಒಡಂಬಡಿಕೆಯ ನಿರ್ದಿಷ್ಟ ನಿಲುವು/ ಪದಾವಳಿಗಳೇನು?
* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರ ವಿನ್ಯಾಸಗಳೇನು?
* "ಕ್ರಮಿಕ ಅನುಷ್ಠಾನ" (Progressive implementation) ಸಮೀಪನ ಎಂದರೇನು?

5. ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆ. 13

* ಸಣ್ಣ ಪ್ರಮಾಣದ ಮೀನುಗಾರಿಕೆಗೂ ಕಾರ್ಮಿಕ ಮಟ್ಟವನ್ನು ಪರಿಗಣಿಸುವುದು ಯಾಕೆ ಮುಖ್ಯವಾಗಿರುತ್ತದೆ?

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಿಂದ ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಮೀನುಗಾರರು ಮತ್ತು ಮೀನುಗಾರಿಕೆ ದೋಣಿಗಳಿಗೆ ಸಿಗುವ ಲಾಭವೇನು?

* ಎಲ್ಲಾ ವರ್ಗದ ಮೀನುಗಾರರು ಮತ್ತು ಮೀನುಗಾರಿಕೆ ನೌಕೆಗಳನ್ನು ಮೀನುಗಾರಿಕೆ ವಲಯದಲ್ಲಿ ಕಾಯಕ ಒಡಂಬಡಿಕೆ, 2007 ಒಳಪಡಿಸಿದೆಯೆ?

* ಸಮುದ್ರ ತೀರಗಳಾಧಾರಿತ ಮೀನುಗಾರಿಕಾ ಚಟುವಟಿಕೆಯಲ್ಲಿ ನಿರತರಾಗಿರುವವರಿಗೂ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ , 2007 ರಿಂದ ಪ್ರಯೋಜನವಾಗುತ್ತದೆಯೇ?

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಡಿ ಒಳಪಡುವ ಮೀನುಗಾರರಿಗೆ ಒದಗುವ ಸೌಲಭ್ಯಗಳಿಗೆ ಸಮಾನವಾದ ಸೌಲಭ್ಯಗಳನ್ನು ಸಮುದ್ರ ತೀರಗಳಾಧಾರಿತ ಮೀನುಗಾರರಿಗೂ ದೊರೆಯುವಂತೆ ಕಚಿತಪಡಿಸಿಕೊಳ್ಳಲು ಮೀನುಗಾರರು ಮತ್ತು ಇತರ ನಾಗರಿಕ ಸಂಘಟನೆಗಳೇನು ಮಾಡಬಹುದು?

6. ಮುನ್ನಡೆಯುವ ಹಾದಿ 17

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರ ಅಳವಡಿಕೆ ಮತ್ತು ಸ್ಥಿರೀಕರಣಕ್ಕಾಗಿ ಸದಸ್ಯ ರಾಷ್ಟ್ರಗಳಿಂದ ಏನು ನಿರೀಕ್ಷಿಸಲಾಗಿದೆ?


* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರ ಸವಲತ್ತುಗಳನ್ನು ಮುಂದುವರಿಯುತ್ತಿರುವ ದೇಶಗಳಲ್ಲಿ ಅನುಷ್ಠಾನಗೊಳಿಸಲು ಸಹಾಯ ಮಾಡುವಂತೆ ಯಾವುದಾದರು ವಿಶೇಷ ವ್ಯವಸ್ಥೆಗಳಿವೆಯೇ?

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಸಮರ್ಪಕ ಅನುಷ್ಟಾನವನ್ನು ಖಚಿತಪಡಿಸಿಕೊಳ್ಳಲು ಮೀನುಗಾರರು ಮತ್ತು ಇತರ ನಾಗರಿಕ ಸಂಘಟನೆಗಳೇನು ಮಾಡಬಹುದು?

7. ಉಪಸಂಹಾರ 20

* ಕೆಲವು ಪರಿಸಮಾಪ್ತಿ ವಚನಗಳು

# 1 ಪೀಠಿಕೆ




* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ – 2007 **ಎಂದರೇನು?**

ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಸರಕಾರ, ಕಾರ್ಮಿಕರು ಮತ್ತು ನಿಯೋಜಕ ಪ್ರತಿನಿಧಿಗಳೆಲ್ಲರಿಂದ ಅಂಗೀಕೃತವಾದ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ 2007, ಮೀನುಗಾರಿಕೆ ವಲಯಕ್ಕೆ ಹೊಸ ಗುಣಮಟ್ಟವನ್ನು ನಿಗದಿಪಡಿಸುತ್ತದೆ.

ಈ ಒಡಂಬಡಿಕೆಯ ಮುಖ್ಯ ಉದ್ದೇಶವೆಂದರೆ "ಮೀನುಗಾರರಿಗೆ ಅವರು ಕೆಲಸ ಮಾಡುವ ನೌಕೆಯಲ್ಲಿ ಉತ್ತಮ ಗುಣಮಟ್ಟದ ಸೌಕರ್ಯಗಳು ದೊರೆಯುವ ನಿಟ್ಟಿನಲ್ಲಿ , ಕನಿಷ್ಠ ಬೇಡಿಕೆಗಳಾದ: ಸೇವಾ ಶರ್ತಗಳು; ವಸತಿ ಮತ್ತು ಆಹಾರ; ಔದ್ಯೋಗಿಕ ಸುರಕ್ಷಿತತೆ; ಆರೋಗ್ಯ ರಕ್ಷಣೆ ; ವೈದ್ಯಕೀಯ ನೆರವು ಮತ್ತು ಸಾಮಾಜಿಕ ಭದ್ರತೆ". ಮತ್ತು ಈಗಾಗಲೆ ಅಸ್ಥಿತ್ವದಲ್ಲಿರುವ ಪರಿಕರಗಳು ಪರಿಗಣಿಸದಿರುವ ಹೊಸ ಸಮಸ್ಯೆಗಳಾದ, ವಿದೇಶಿ ಬಂಧನಕ್ಕೊಳಗಾದ ಮೀನುಗಾರರ ಪುನರ್ದೇಶಾವರ್ತನ; ನೇಮಕಾತಿ, ಸಮುದ್ರದಲ್ಲಿರುವಾಗ ವೈದ್ಯಕೀಯ ನೆರವು, ಔದ್ಯೋಗಿಕ ಸುರಕ್ಷಿತತೆ, ಆರೋಗ್ಯ ಮುಂತಾದವುಗಳ ಅಳವಡಿಕೆ ಮತ್ತು ಸಮರ್ಪಕ ಅನುಷ್ಠಾನ ಇವುಗಳಿಗೆ ಒತ್ತು ನೀಡಲಾಗಿದೆ.

ಈ ಒಡಂಬಡಿಕೆಯು ಮುಖ್ಯವಾಗಿ ಪತಾಕ ರಾಷ್ಟ್ರಗಳು ಅಂದರೆ ಮೀನುಗಾರಿಕೆ ದೋಣಿಗಳನ್ನು ನೋಂದಾಯಿಸಿ ಅವುಗಳು ಎಲ್ಲಿ ಮೀನುಗಾರಿಕೆ ಮಾಡುವರೋ ಎಂಬುದು ಲೆಕ್ಕಿಸದೆ ಅವುಗಳ ಮೇಲೆ ಅಧಿಕಾರ ಕ್ಷೇತ್ರವನ್ನು ಚಲಾಯಿಸುವ ರಾಷ್ಟ್ರಗಳನ್ನು ಲಕ್ಷ್ಯವಿಡುತ್ತದೆ. ಈ ಒಡಂಬಡಿಕೆಯಡಿ ಬಂದರು ರಾಷ್ಟ್ರಗಳು ಅಂದರೆ ರಾಷ್ಟ್ರೀಯತೆ ಲೆಕ್ಕಿಸದೆ ತಮ್ಮ ಅಧಿಕಾರ ಕ್ಷೇತ್ರದಡಿ ಬರುವ ಮೀನುಗಾರಿಕೆ ಬಂದರುಗಳಲ್ಲಿ ಬರುವ ಮೀನುಗಾರಿಕೆ ದೋಣಿಗಳ ಮೇಲೆ ಅಧಿಕಾರ ಕ್ಷೇತ್ರ ಚಲಾಯಿಸುವ ರಾಷ್ಟ್ರಗಳಿಗೂ ಸಹ ನಿಯಂತ್ರಣ ವ್ಯವಸ್ಥೆಗಳನ್ನು ಒಳಗೊಂಡಿದೆ.




**2. ಅಂತಾರಾಷ್ಟೀಯ ಕಾರ್ಮಿಕ ಸಂಘಟನೆ (ಇಂಟರ್ ನೇಶನಲ್ ಲೇಬರ್ ಆರ್ಗನೈಷೇಶನ್–ಐ.ಎಲ್. ಒ.)**

*** ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆ ಎಂದರೇನು?**

**ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಸಂಯುಕ್ತ ರಾಷ್ಟ್ರಗಳ ಒಂದು ವಿಶಿಷ್ಟ ಸಂಸ್ಥೆಯಾಗಿದ್ದು, ಕೆಲಸ ಮಾಡುವ ಪರಿಸ್ಥಿತಿಗಳು, ಸಮಾನ ಅವಕಾಶಗಳು, ಸಾಮಾಜಿಕ ಭದ್ರತೆ, ಜೀತ ಪದ್ಧತಿ, ಸಂಘಟನೆಗಳನ್ನು ರಚಿಸಿಕೊಳ್ಳುವ ಸ್ವಾತಂತ್ರ್ಯ ಮತ್ತು ಕಾರ್ಮಿಕರ ಕನಿಷ್ಟ ವಯೋಮಿತಿಯ ಮೇಲೆ ನಿರ್ಬಂಧ ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಅಂತರ ರಾಷ್ಟ್ರೀಯ ಮಟ್ಟವನ್ನು ಅಭಿವೃದ್ಧಿ ಪಡಿಸುತ್ತದೆ.**

**1919 ರಲ್ಲಿ, ಮೊದಲ ವಿಶ್ವ ಮಹಾಯುದ್ಧ ಕೊನೆಗೊಂಡ ಸಮಯದಲ್ಲಿ ಸ್ಥಾಪಿಸಲ್ಪಟ್ಟ ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಜಾಗತಿಕ ನೆಲೆಯಲ್ಲಿ ಚಿರ ಶಾಂತಿ ನೆಲಸಬೇಕಾದರೆ ಜಗತ್ತಿನಾದ್ಯಂತ ಕಾರ್ಮಿಕ ವರ್ಗಕ್ಕೆ ಉತ್ತಮ ಗುಣ ಮಟ್ಟದ ಜೀವನ ಒದಗಿಸುವುದರಿಂದ ಮಾತ್ರ ಸಾಧ್ಯ ಎಂಬ ನಿಲುವು ಹೊಂದಿದೆ. 1946ರಲ್ಲಿ "ಲೀಗ್ ಆಫ ನೇಶನ್ಸ್ "ನನ್ನು ಹುಟ್ಟು ಹಾಕಿದ "ಟ್ರೀಟಿ ಆಫ್ ವರ್ಸಲೆಸ್" ಇದು ಸೃಷ್ಟಿಸಿದ ಸಂಘಟನೆಗಳಲ್ಲಿ ಇನ್ನೂ ಸಕ್ರಿಯವಾಗಿರವ ವಿಶ್ವಸಂಸ್ಥೆಯ ಪ್ರಥಮ ವಿಶೇಷ ಘಟಕವೆಂದು ಐ.ಎಲ್.ಒ.ಪರಿಗಣಿಸಲ್ಪಟ್ಟಿದೆ. 1969ರಲ್ಲಿ 50 ನೆಯ ವಾರ್ಷಿಕೋತ್ಸವದ ಸಂಭ್ರಮದಲ್ಲಿದ್ದ ಐ.ಎಲ್.ಒ. ಗೆ ನೊಬೆಲ್ ಶಾಂತಿ ಪುರಸ್ಕಾರ ನೀಡಲಾಯಿತು.**

**ಐ.ಎಲ್.ಒ.ವು ವಿಶ್ವದ ಎಲ್ಲ ಮಹಿಳಾ ಮತ್ತು ಪುರುಷ ಕಾರ್ಮಿಕರಿಗೆ ಉತ್ತಮ ಮತ್ತು ಉತ್ಪಾದಕತೆಗೆ ಪೂರಕವಾದ – ಸ್ವಾತಂತ್ರ್ಯ, ನೀತಿ, ಭದ್ರತೆ ಮತ್ತು ಮಾನವ ಘನತೆ ಕಾಯ್ದುಕೊಳ್ಳಬಲ್ಲ ಗುಣಮಟ್ಟದ ಕಾರ್ಯಕ್ಷೇತ್ರ ದೊರಕಿಸಲು ದೀಕ್ಷಾಬದ್ಧವಾಗಿದೆ. ಇದರ ಮುಖ್ಯ ಉದ್ದೇಶಗಳೆಂದರೆ ಕಾರ್ಮಿಕರಿಗೆ ಒಳ್ಳೆಯ ಉದ್ಯೋಗಾವಕಾಶಗಳ ಲಭ್ಯತೆ, ಸುಧಾರಿತ ಸಾಮಾಜಿಕ ರಕ್ಷಣೆ, ಕೆಲಸಕ್ಕೆ ಸಂಬಂಧಿಸಿದ ಸಮಸ್ಯೆಗಳ ಚರ್ಚೆಯಲ್ಲಿ ಪಾಲ್ಗೊಳ್ಳುವಿಕೆ ಇತ್ಯಾದಿಗಳನ್ನು ಪ್ರೋತ್ಸಾಹಿಸುವುದಾಗಿದೆ.**

**ಸಾಮಾಜಿಕ ನ್ಯಾಯ, ಮತ್ತು ಜಾಗತಿಕ ನೆಲೆಯಲ್ಲಿ ಸ್ವೀಕರಿಸಲ್ಪಟ್ಟ ಮಾನವ ಮತ್ತು ಕಾರ್ಮಿಕ ಹಕ್ಕುಗಳನ್ನು ಪ್ರೋತ್ಸಾಹಿಸುವ ಮೂಲಕ ಐ.ಎಲ್.ಒ. ತನ್ನ ಸ್ಥಾಪನೆಯ ಮೂಲಮಂತ್ರವಾಗಿರುವ "ಕಾರ್ಮಿಕ ಶಾಂತಿಯೇ ಪ್ರಗತಿಗೆ ದಾರಿ" ಎಂಬ ಸೂತ್ರ ಪರಿಪಾಲಿಸುತ್ತಿದೆ . ಐ.ಎಲ್.ಒ. ಉತ್ತಮ ಉದ್ಯೋಗ ಸೃಷ್ಟಿ ಮತ್ತು**

ನಿರಂತರ ಶಾಂತಿ, ಪ್ರಗತಿ ಹಾಗೂ ಸಮೃದ್ಧಿಗಾಗಿ ಯೋಗ್ಯ ಆರ್ಥಿಕ ಹಾಗೂ ಕಾಯಕ ಪರಿಸರ ನಿರ್ಮಾಣದಲ್ಲಿ ಕಾರ್ಮಿಕ ಮತ್ತು ವ್ಯವಸಾಯ ವರ್ಗಗಳೆರಡನ್ನೂ ಪಾಲುದಾರರನ್ನಾಗಿಸುವತ್ತ ಕಾರ್ಯನಿರತವಾಗಿದೆ.

ಐ.ಎಲ್.ಓ. ದ ಸದಸ್ಯರು ಎಂದರೆ ರಾಷ್ಟ್ರಗಳು. 2007 ಡಿಸೆಂಬರ್ 20 2007ರಲ್ಲಿ 181 ಸದಸ್ಯ ರಾಷ್ಟ್ರಗಳಿವೆ.

* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆ ಏನು ಮಾಡುತ್ತದೆ?

ಐ.ಎಲ್.ಓ.ವು ಒಡಂಬಡಿಕೆ ಮತ್ತು ಶಿಫಾರಸುಗಳ ಮೂಲಕ ಅಂತರ ರಾಷ್ಟ್ರೀಯ ಮೂಲಭೂತ ಕಾರ್ಮಿಕ ಹಕ್ಕುಗಳ ಗುಣಮಟ್ಟದ ಕನಿಷ್ಟ ಮಟ್ಟವನ್ನು ನಿರ್ಧರಿಸುತ್ತದೆ. ಇದರಲ್ಲಿ ಒಟ್ಟು ಸೇರುವ ಸ್ವಾತಂತ್ರ್ಯ; ಸಂಘಟನಾ ಹಕ್ಕು, ಸಾಂಘಿಕ ಬೇಡಿಕೆ, ಜೀತಪದ್ದತಿಯ ನಿರ್ಮೂಲನೆ, ಸಮಾನ ಅವಕಾಶಗಳು ಮತ್ತು ಉಪಚಾರ ಮತ್ತು ಕಾಯಕಕ್ಕೆ ಸಂಬಂಧಿಸಿದ ಇತರ ಎಲ್ಲ ವಿಷಯಗಳ ನಿಯಂತ್ರಣಕ್ಕಾಗಿ ಅವುಗಳ ಕನಿಷ್ಟ ಗುಣ ಮಟ್ಟ ಕಾಯ್ದಿರಿಸುವ ಸಲುವಾಗಿ ಸೂಕ್ತ ನಿಬಂಧನೆಗಳ ರಚನೆಯಲ್ಲಿ ನಿರತವಾಗಿದೆ.

ಐ.ಎಲ್.ಓ ಮುಖ್ಯವಾಗಿ ಕಾರ್ಮಿಕ ವರ್ಗದ ಗುಣಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಇತರ ಸಮಸ್ಯೆಗಳಾದ ಕೆಲಸದ ಅವಧಿಯ ಮೇಲೆ ನಿಯಂತ್ರಣ, ಕಾಯಿಲೆ, ಅನಾರೋಗ್ಯ ಮತ್ತು ಅವರ ಕಾರ್ಯಕ್ಷೇತ್ರದಲ್ಲಾಗ ಬಹುದಾದ ಅವಘಡಗಳಿಂದ ಕಾರ್ಮಿಕರ ರಕ್ಷಣೆ, ಅವರ ಮಕ್ಕಳ ಸುರಕ್ಷಿತತೆ, ಮುದಿತನ ಮತ್ತು ಅವಘಡಗಳಿಗೆ ಸೂಕ್ತ ಪರಿಹಾರ, ಪರ ರಾಷ್ಟ್ರಗಳಲ್ಲಿ ನೌಕರಿಮಾಡುತ್ತಿರುವ ಕಾರ್ಮಿಕರ ಹಿತಾಸಕ್ತಿಗಳ ರಕ್ಷಣೆ, ಮತ್ತು ಕಾರ್ಮಿಕರ ಸಾಮಾಜಿಕ ಭದ್ರತೆ ಇತ್ಯಾದಿಗಳ ಕಡೆ ನಿರಂತರ ಗಮನ ನೀಡುತ್ತಿದೆ.

ಐ.ಎಲ್.ಓ ಈ ಕೆಳಗಿನ ಕ್ಷೇತ್ರಗಳಲ್ಲಿ ತಾಂತ್ರಿಕ ಸಲಹೆ ಸಹಾಯ ನೀಡುತ್ತಿದೆ.

* ವೃತ್ತಿಪರ ತರಬೇತಿ ಮತ್ತು ವೃತ್ತಿಪರ ಪುನಸ್ಸಜ್ಜೀಕರಣ

* ಉದ್ಯೋಗ ನೀತಿ.

* ಕಾರ್ಮಿಕ ಆಡಳಿತ

* ಕಾರ್ಮಿಕ ಕಾನೂನು ಮತ್ತು ಕೈಗಾರಿಕಾ ಸಂಬಂಧಗಳು

* ಕೆಲಸ ಮಾಡುವ ಪರಿಸ್ಥಿತಿಗಳು

* ನಿರ್ವಹಣಾ ಅಭಿವೃಧ್ಧಿ

* ಸಹಕಾರಿ ಸಂಸ್ಥೆಗಳು

* ಸಾಮಾಜಿಕ ಭದ್ರತೆ

* ಕಾರ್ಮಿಕ ಅಂಕಿಅಂಶಗಳು

* ಔದ್ಯೋಗಿಕ ಸುರಕ್ಷಿತತೆ ಮತ್ತು ಆರೋಗ್ಯ.

ಕಾರ್ಮಿಕರ ಹಾಗೂ ನಿಯೋಜಕರ ಸ್ವತಂತ್ರ ಸಂಘಟನೆಗಳ ಅಭಿವೃದ್ಧಿ ಪಡಿಸಲು ಮತ್ತು ಇಂತಹ ಸಂಘಟನೆಗಳಿಗೆ ತರಬೇತಿ ಮತ್ತು ಸಲಹಾ ಸೇವೆಗಳನ್ನು ನೀಡಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯು ಉತ್ತೇಜನ ನೀಡುತ್ತದೆ. ಸಂಯುಕ್ತ ರಾಷ್ಟ್ರಗಳ ವ್ಯವಸ್ಥೆಯೊಳಗೆ ಕಾರ್ಮಿಕರು ಮತ್ತು ನಿಯೋಜಕರು ಅದರ ಆಡಳಿತ ಅಂಗದ ಕಾರ್ಯಾಚರಣೆಯಲ್ಲಿ ಸರ್ಕಾರದೊಂದಿಗೆ ಸಮಾನ ಪಾಲುಗಾರರಾಗಿ ಭಾಗವಹಿಸಲು ಅದ್ವಿತೀಯ ತ್ರಿಪಕ್ಷೀಯ ಚೌಕಟ್ಟು ಹೊಂದಿರುತ್ತದೆ.

* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ  ಆಡಳಿತ ರೂಪರೇಷು ಏನು?

ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (ಇಂಟರ್ ನೇಶನಲ್ ಲೇಬರ್ ಕಾನ್ಫರೆನ್ಸ್ – ಐ.ಎಲ್. ಸಿ.), ಒಂದು ಆಡಳಿತ ಮಂಡಳಿ ಮತ್ತು ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಗಳನ್ನು ಹೊಂದಿರುತ್ತದೆ.

ಐ.ಎಲ್. ಸಿ – ಅನೇಕ ಬಾರಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸತ್ತು (ಪಾರ್ಲಿಮೆಂಟು) ಎಂದೂ ಕರೆಯಲ್ಪಡುತ್ತದೆ – ಪ್ರತಿ ವರ್ಷ ಜೂನ್ ತಿಂಗಳಲ್ಲಿ ಜೆನೀವಾದಲ್ಲಿ ಸಭೆ ಸೇರುತ್ತದೆ. ಪ್ರತಿ ಸದಸ್ಯ ರಾಷ್ಟ್ರವನ್ನು ಎರಡು ಸರಕಾರದ ಪ್ರತಿನಿದಿಗಳು, ಒಂದು ನಿಯೋಜಕ ಪ್ರತಿನಿಧಿ ಮತ್ತು ಒಂದು ಕಾರ್ಮಿಕ ಪ್ರತಿನಿಧಿ ಪ್ರತಿನಿಧಿಸುತ್ತದೆ. ಅಂತಾರಾಷ್ಟ್ರಿಯ ಮಟ್ಟದ ಕಾರ್ಮಿಕ ಗುಣಮಟ್ಟ ರಚನೆ ಮತ್ತು ಸ್ವೀಕೃತಿ ಈ ಐ.ಎಲ್.ಸಿ.ಯ ಸಭೆಯಲ್ಲಿ ನಡೆಯುತ್ತದೆ. ಈ ಒಡಂಬಡಿಕೆ ಮತ್ತು ಸಲಹೆ ಸೂಚನೆಗಳ ಸಮರ್ಪಕ ಅನುಷ್ಟಾನ ಮತ್ತು ಅಳವಡಿಕೆ ರಾಷ್ಟ್ರೀಯ ಮಟ್ಟದಲ್ಲಿ ಐ.ಎಲ್. ಸಿ ಯ ಉಸ್ತುವಾರಿಯಲ್ಲಿ ನಡೆಯುತ್ತದೆ. ಐ.ಎಲ್. ಸಿಯ ಎಲ್ಲಾ ಸಭೆಗಳ ಕಾರ್ಯಸೂಚಿಯನ್ನು ಆಡಳಿತ ಮಂಡಳಿ ನಿರ್ಧರಿಸುತ್ತದೆ.

ಆಡಳಿತ ಮಂಡಳಿಯು ಐ.ಎಲ್.ಒ ದ ಕಾರ್ಯಪಾಲಿಕ ಪರಿಷತ್ತು ಆಗಿದ್ದು ಅದರ ಅಂತಿಮ  ನಿರ್ಣಾಯಕ ಮಂಡಳಿಯಾಗಿರುತ್ತದೆ. ಇದು ಅಂತರ ರಾಷ್ಟ್ರೀಯ ಕಾರ್ಮಿಕ ಗುಣಮಟ್ಟದ ಅನುಷ್ಟಾನದ ಮೇಲ್ವಿಚಾರಣೆ ನೋಡಿಕೊಳ್ಳುತ್ತದೆ. ಇದು ವರ್ಷದಲ್ಲಿ ಮೂರು ಬಾರಿ ಜೆನೀವಾದಲ್ಲಿ ಸಭೆ ಸೇರುತ್ತದೆ. ಐ.ಎಲ್.ಒ.ದ ನೀತಿ ಏನಿರಬೇಕೆಂದು ನಿರ್ಧರಿಸಿ, ಸೂಕ್ತ ಕಾರ್ಯಕ್ರಮ ಮತ್ತು ಮುಂಗಡ ಪತ್ರ ತಯಾರಿಸಿ ಅದನ್ನು ಐ.ಎಲ್.ಸಿ.ಯ ಸ್ವೀಕೃತಿಗಾಗಿ ಒಪ್ಪಿಸುತ್ತದೆ. ಅಧ್ಯಕ್ಷರನ್ನು ಆರಿಸುವುದೂ ಇದರ ಜವಾಬ್ದಾರಿ ಆಗಿರುತ್ತದೆ. ಆಡಳಿತ ಮಂಡಳಿಯಲ್ಲಿ ಸರಕಾರದ 28, ಕಾರ್ಮಿಕರ 14, ಮತ್ತು ನಿಯೋಜಕರ 14 ಹೀಗೆ ಒಟ್ಟು 56 ಸದಸ್ಯರಿದ್ದಾರೆ. ಸರಕಾರಗಳ ಪ್ರತಿನಿಧಿಗಳಲ್ಲಿ 10 ಜನರನ್ನು ಐ.ಎಲ್.ಒ.ವು ಪ್ರಮುಖ ಕೈಗಾರಿಕಾ ಮಹತ್ವದ ಸದಸ್ಯರಾಗಿ ನೇಮಿಸುತ್ತದೆ(ಈಗ ಮುಂದುವರಿಯುತ್ತಿರುವ ದೇಶಗಳಾದ ಬ್ರೇಝಿಲ್, ಚೀನಾ ಮತ್ತು ಭಾರತದ ಪ್ರತಿನಿಧಿಗಳು ಇದರ ಸದಸ್ಯರಾಗಿದ್ದಾರೆ.) ಐ.ಎಲ್. ಸಿಯ ತ್ರಿಪಕ್ಷೀಯ ವಿನ್ಯಾಸವು ಕಾರ್ಮಿಕ, ನಿಯೋಜಕ ಮತ್ತು ಸರಕಾರ ಈ ಮೂರೂ ವರ್ಗಗಳಿಗೂ ಸಮಾನ ಪ್ರಾತಿನಿಧ್ಯ  ನೀಡುವ ಧ್ಯೇಯವನ್ನು  ಒಳಗೊಂಡಿದೆ.

ಐ.ಎಲ್.ಒ ದ ಕಛೇರಿಯು  ಐ.ಎಲ್.ಒ.ದ ಶಾಶ್ವತ ಕಾರ್ಯಾಲಯವಾಗಿದ್ದು ಅದರ ಎಲ್ಲಾ ಚಟುವಟಿಕೆಗಳ ಕೇಂದ್ರ ಬಿಂದುವಾಗಿದೆ. ಎಲ್ಲ ಕೆಲಸಗಳೂ ಆಡಳಿತ ಮಂಡಳಿಯ ಪರಿವೀಕ್ಷಣೆ ಮತ್ತು ಅದರ ಅಧ್ಯಕ್ಷರ ನೇತೃತ್ವದಲ್ಲಿ ನಡೆಯುತ್ತವೆ. ಅಧ್ಯಕ್ಷರು 5 ವರ್ಷಗಳ  ಅವಧಿಗೆ ಅರಿಸಲ್ಪಟ್ಟು , ಪುನರಾಯ್ಕೆಗೆ ಅರ್ಹರಾಗಿರುತ್ತಾರೆ. 110ಕ್ಕಿಂತಲೂ ಅಧಿಕ ದೇಶಗಳ ಸುಮಾರು 1900 ಮಂದಿ ಅಧಿಕಾರಿಗಳು ಜೆನೀವಾದ ಮುಖ್ಯ ಕಛೇರಿ ಮತ್ತು ಜಗತ್ತಿನಾದ್ಯಂತ ಪಸರಿಸಿರುವ 40 ಕ್ಷೇತ್ರ ಕಛೇರಿಗಳಲ್ಲಿ  ಸೇವೆ ಸಲ್ಲಿಸುತ್ತಿದ್ದಾರೆ.

* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ತ್ರಿಪಕ್ಷೀಯ ಚೌಕಟ್ಟು  ಏನು?

ಐ.ಎಲ್.ಒ ವು ಸರಕಾರ, ನಿಯೋಜಕ ಮತ್ತು ಕಾರ್ಮಿಕರಂಗದ ಪ್ರತಿನಿಧಿಗಳನ್ನು ಸಮಾನ ನೆಲೆಯಲ್ಲಿ ಒಟ್ಟುಗೂಡಿಸಿ ತನ್ಮೂಲಕ ಅದರ ಎಲ್ಲ ಅಂಗಗಳ ಕೆಲಸಕಾರ್ಯಗಳಲ್ಲಿ  ಸರ್ವಸಮ್ಮತದ ನಿರ್ಣಯಗಳನ್ನು ರೂಪಿಸುವ ನಿಟ್ಟಿನಲ್ಲಿ ಈ ತ್ರಿಪಕ್ಷೀಯ ಚೌಕಟ್ಟನ್ನು ವಿನ್ಯಾಸಗೊಳಿಸಿದೆ. ಈ ತ್ರಿಪಕ್ಷೀಯ ಚೌಕಟ್ಟು ಸದಸ್ಯ ರಾಷ್ಟ್ರಗಳ ಸರಕಾರ, ಅಲ್ಲಿನ ಮಾಲಿಕ ಮತ್ತು ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡಿದೆ. ಐ.ಎಲ್.ಒ.ದ ಸಂವಿಧಾನವು ಅದರ ಸಭೆಯಲ್ಲಿ ಪ್ರತಿ ಸದಸ್ಯ ರಾಷ್ಟ್ರಗಳಿಂದಲೂ ಈ ತೆರನಾದ ಮೂರೂ ಅಂಗಗಳ ( ಸರಕಾರದ ಎರಡು, ನಿಯೋಜಕ ಮತ್ತು ಕಾರ್ಮಿಕರ ಒಂದೊಂದು ಪ್ರತಿನಿಧಿಗಳು ಮತ್ತು ಅವುಗಳ ಸಲಹಾಗಾರರುಗಳುಳ್ಳ ) ನಿಯೋಗವನ್ನು ನಿರೀಕ್ಷಿಸುತ್ತದೆ. ಮಾಲಿಕ ಹಾಗೂ ಕಾರ್ಮಿಕ ಸದಸ್ಯರುಗಳನ್ನು ಆಯಾ ದೇಶದ ಸರಕಾರಗಳು ಅಲ್ಲಿನ ಅತ್ಯಧಿಕ ಕಾರ್ಮಿಕ ಮತ್ತು  ನಿಯೋಜಕರನ್ನು ಪ್ರತಿನಿಧಿಸುವ ರಾಷ್ಟ್ರೀಯ ಮಟ್ಟದ ಸಂಘಟನೆಗಳಿಂದ ಆರಿಸುತ್ತವೆ.

* ಕಾರ್ಮಿಕರ ಸ್ಥಿತಿ ಸುಧಾರಿಸಲು ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ಬಳಿ ಇರುವ ಸಲಕರಣೆಗಳೇನು?

ಐ.ಎಲ್.ಓ ಕಾರ್ಮಿಕರ ಸ್ಥಿತಿ ಸುಧಾರಿಸಲು ಬಳಸುವ ಮಾರ್ಗಗಳು ಐ.ಎಲ್.ಸಿ. ಸ್ವೀಕರಿಸಿರುವ ಆಂತಾರಾಷ್ಟ್ರೀಯ ಕಾರ್ಮಿಕ ಒಡಂಬಡಿಕೆ ಮತ್ತು ಸಲಹೆಗಳ ರೂಪದಲ್ಲಿರುತ್ತವೆ. ಇವೆಲ್ಲ ಅಂತರ ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟಿರುವ ಸಾಮಾಜಿಕ ನೀತಿಯ ತತ್ವ ಹಾಗು ಉದ್ದೇಶಗಳನ್ನು ಪ್ರೋತ್ಸಾಹಿಸುತ್ತವೆ ಮತ್ತು ಕಾಯಕಕ್ಕೆ ಸಂಬಂಧಿಸಿರುವ ಎಲ್ಲ ವಿಷಯಗಳಿಗೆ ಅಂತಾರಾಷ್ಟ್ರೀಯ ಗುಣಮಟ್ಟದ ವ್ಯವಸ್ಥೆಯನ್ನು ಹೊಂದಿರುತ್ತದೆ. ಐ.ಎಲ್.ಓ. ಒಡಂಬಡಿಕೆಗಳೆಲ್ಲ ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯ ಸದಸ್ಯರಾಷ್ಟ್ರಗಳಿಂದ ಸ್ಥರಿಕರಣಕ್ಕೆ ಒಳಪಟ್ಟ ಅಂತಾರ ರಾಷ್ಟ್ರೀಯ ಒಪ್ಪಂದಗಳಾಗಿರುತ್ತದೆ. ಈ ಶಿಫಾರಸುಗಳೆಲ್ಲ – ಹೆಚ್ಚಾಗಿ ಒಡಂಬಡಿಕೆಯಲ್ಲಿ ಅಡಕವಾಗಿರುವ ವಿಷಯಗಳೇ ಆಗಿದ್ದು ರಾಷ್ಟ್ರೀಯ ನೀತಿ ಮತ್ತು ಪ್ರಕ್ರಿಯೆಗಳಿಗೆ ಮಾರ್ಗದರ್ಶಿ ಸೂತ್ರಗಳು ಮಾತ್ರ ಅನ್ಯಥಾ ಯಾವುದೇ ರೀತಿಯ ಹೇರಿಕೆ ಯಾ ಒತ್ತಡಕ್ಕೆ ಒಳಗಾಗಿಲ್ಲ. ಈ ಎರಡೂ ವಿಧಾನಗಳು ಜಾಗತಿಕ ಕಾಯಕ ಗುಣಮಟ್ಟ ಮತ್ತು ಅಳವಡಿಕೆಗಳ ಮೇಲೆ ಗಾಢ ಪ್ರಭಾವ ಬೀರುವ ಗುರಿಯನ್ನು ಹೊಂದಿವೆ.

* ಅಂತರ ರಾಷ್ಟೀಯ ಕಾರ್ಮಿಕ ಸಂಘಟನೆಯು ಒಡಂಬಡಿಕೆ ಅಥವಾ ಶಿಫಾರಸ್ಸುಗಳನ್ನು ಅಂಗೀಕರಿಸುವುದು ಹೇಗೆ?

ಯಾವುದೇ ಒಡಂಬಡಿಕೆ ಯಾ ಶಿಪಾರಸು ಸ್ವೀಕರಿಸುವ ಮೊದಲು ಐ.ಎಲ್.ಸಿ.ಯು ಸದಸ್ಯರೊಂದಿಗೆ ಸಾಕಷ್ಟು ಚರ್ಚಿಸಿ, ಎಲ್ಲಾ ತಾಂತ್ರಿಕ ಪೂರ್ವ ತಯಾರಿ ಆಗಬೇಕಾದ ನಿಟ್ಟಿನಲ್ಲಿ ನಿಯಮಾವಳಿಗಳನ್ನು ಸಿಧ್ಧಪಡಿಸುತ್ತದೆ. ಐ.ಎಲ್.ಸಿ. ಈ ನಿಟ್ಟಿನಲ್ಲಿ ಒಂದು ಸಮಿತಿ ನೇಮಿಸಿ ಸಂಬಂಧಪಟ್ಟ ವಿಷಯದ ಬಗ್ಗೆ ವರದಿ ತಯಾರಿಸಲು ಸೂಚಿಸಬಹುದು. ಒಮ್ಮೆ ಈ ವರದಿ ದೊರೆತ ಮೇಲೆ ಪ್ರಸ್ತಾವಿತ ಒಡಂಬಡಿಕೆ ಯಾ ಶಿಫಾರಸನ್ನು ಅಂಗೀಕರಣಕ್ಕಾಗಿ ಪರಿಗಣಿಸಬಹುದು. ಒಡಂಬಡಿಕೆ ಅಥವಾ ಶಿಫಾರಸ್ಸುಗಳ ವ್ಯವಸ್ಥೆಗಳನ್ನು ಕರಡು ತಯಾರಿ ಸಮಿತಿಗೆ ಅಂತಿಮ ರೂಪು ಕೊಡಲು ಉಲ್ಲೇಖಿಸಲಾಗುತ್ತದೆ. ಆ ಮೇಲೆ ಐ.ಎಲ್.ಓ.ದ ಸಂವಿಧಾನದ ಅನುಚ್ಛೇದ 19ರ ಅನ್ವಯ ಒಡಂಬಡಿಕೆ ಯಾ ಶಿಫಾರಸ್ಸನ್ನು ಅಂಗೀಕರಿಸಲು ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳನವು ಅಂತಿಮ ಮತ ತೆಗೆದುಕೊಳ್ಳುತ್ತದೆ. ಒಡಂಬಡಿಕೆ ಅಥವಾ ಶಿಫಾರಸ್ಸುಗಳ ಅಂಗೀಕಾರಕ್ಕಾಗಿ ನಡೆಸುವ ಅಂತಿಮ ಮತದಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಮ್ಮೇಳದಲ್ಲಿ ಹಾಜರಿರುವ ಪ್ರತಿನಿಧಿಗಳು ಚಲಾಯಿಸಿದ ಮತಗಳ 2/3 ಭಾಗದ ಬಹುಮತದ ಅಗತ್ಯವಿದೆ.

ಈ ಒಡಂಬಡಿಕೆಗಳು ಸರ್ಕಾರಗಳ ಸ್ಥಿರೀಕರಣಕ್ಕಾಗಿ ಅಥವಾ ಔಪಚಾರಿಕ ಅನುಮೋದನೆಗೆ ತೆರೆದಿರುತ್ತದೆ. ಈ ಒಡಂಬಡಿಕೆ / ಶಿಫಾರಸನ್ನು ಸ್ಥರೀಕರಿಸಿದ ಪ್ರತಿಯೊಬ್ಬ ಸದಸ್ಯರು, ಅದು ಭಾಗಿಯಾಗಿರುವ ಒಡಂಬಡಿಕೆಯ ವ್ಯವಸ್ಥೆಗಳ ಅನುಷ್ಟಾನಕ್ಕಾಗಿ ಕೈಕೊಂಡ ಕಾರ್ಯಕ್ರಮಗಳ ಅಂದರೆ ರಾಷ್ಟ್ರದ ಶಾಸನದ ಅಭಿವೃದ್ಧಿ ಬಗ್ಗೆ ವಾರ್ಷಿಕ ವರದಿಯನ್ನು ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಗೆ ನೀಡಲು ಒಪ್ಪಿಕೊಳ್ಳಬೇಕಾಗಿದೆ. ಸದಸ್ಯ ರಾಷ್ಟ್ರಗಳು ಅವರು ಅನುಮೋದಿಸಲು ಒಪ್ಪದಿರುವ ಒಡಂಬಡಿಕೆಯ ಬಗ್ಗೆ ಕೂಡ ವರದಿ ನೀಡಲು ಬಾಧ್ಯತೆ ಹೊಂದಿರುತ್ತದೆ.

ಅದಾಗ್ಯೂ, ಈ ಶಿಫಾರಸ್ಸುಗಳು ಕಾನೂನು ರೀತ್ಯಾ ಅನುಷ್ಟಾನ ಬಧ್ಧವಲ್ಲ ಮತ್ತು ಅದಕ್ಕೆ ಸರಕಾರಗಳ ಮೇಲೆ ಯಾವುದೇ ಔಪಚಾರಿಕ ಬಾಧ್ಯತೆ ಸೃಷ್ಟಿಸುವುದಿಲ್ಲ. ಅವುಗಳು ಸರಕಾರದ ಸಾಮಾಜಿಕ ನೀತಿಯ ಮಾರ್ಗದರ್ಶಿ ಸೂತ್ರಗಳು ಮಾತ್ರ.



ಮೀನುಗಾರಿಕೆಗೆ ಸಂಬಂಧಪಟ್ಟ ಒಡಂಬಡಿಕೆಗಳು

**3 ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆ ಮತ್ತು ಮೀನುಗಾರಿಕೆ ವಲಯ**

*** ಮೀನುಗಾರಿಕೆ ವಲಯದಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಒಳಗೊಳ್ಳುವಿಕೆ ಏನು?**

ಮೀನುಗಾರಿಕಾ ವಲಯದಲ್ಲಿ ಕಾರ್ಮಿಕರ ಪರಿಸ್ಥಿತಿಗಳ ಸುಧಾರಣೆಯಲ್ಲಿ ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಆಸಕ್ತಿಯು 1920ರಲ್ಲಿ ಇಟಲಿಯ ಜಿನೋವಾದಲ್ಲಿ ಅದರ ಎರಡನೆಯ ಅಧಿವೇಶನದಲ್ಲಿ ಮತ್ಸ್ಯೋದ್ಯಮದಲ್ಲಿ ಕೆಲಸದ ಅವಧಿಯನ್ನು ನಿಗಧಿಪಡಿಸುವ ಸಂಬಂಧ ಅಂಗೀಕರಿಸಿದ ಶಿಫಾರಸ್ಸಿನೊಂದಿಗೆ ಪ್ರಾರಂಭವಾಗಿದೆ. ದಿನವೊಂದಕ್ಕೆ 8 ಗಂಟೆ ಅಥವಾ ವಾರಕ್ಕೆ 48 ಗಂಟೆಗಳನ್ನು ಮಾನದಂಡವಾಗಿಡುವ ಲಕ್ಷ್ಯದೊಂದಿಗೆ ಇನ್ನೂ ಜಾರಿ ಇಲ್ಲದೆಡೆ ಜಾರಿಗೆ ತರಲು ಪ್ರಸ್ತಾವಿಸಿರುತ್ತದೆ.

ಇದಾದ 40 ವರ್ಷಗಳ ಬಳಿಕ ಮೀನುಗಾರಿಕೆಗೆ ಸಂಬಂಧಿಸಿದ ಮೂರು ಒಡಂಬಡಿಕೆಗಳನ್ನು ಐ.ಎಲ್.ಸಿ. ಅಂಗೀಕರಿಸಿದೆ. ಅವೆಂದರೆ ಕನಿಷ್ಟ ವಯೋಮಿತಿ (ಮೀನು ಕಾರ್ಮಿಕರ) ಒಡಂಬಡಿಕೆ 1959 (ಕ್ರ.ಸಂ.112), ವೈದ್ಯಕೀಯ ತಪಾಸಣೆ (ಮೀನು ಕಾರ್ಮಿಕರ) ಒಡಂಬಡಿಕೆ 1959 (ಕ್ರ.ಸಂ. 113) ಮತ್ತು ಮೀನು ಕಾರ್ಮಿಕರ ಒಪ್ಪಂದದ ವಿಧಿಗಳ ಒಡಂಬಡಿಕೆ 1959 (ಕ್ರ.ಸಂ. 114)

ಒಡಂಬಡಿಕೆ ಕ್ರ.ಸಂ. 112 ಇದು ಎಲ್ಲ ವಾಣಿಜ್ಯ ಸಮುದ್ರ ಮೀನುಗಾರಿಕಾ ನೌಕೆಗಳಿಗೆ ಅನ್ವಯಿಸುತ್ತದೆ.ಇದು ಮೀನುಗಾರಿಕಾ ನೌಕೆಗಳಲ್ಲಿ 15 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನೇಮಿಸುವುದನ್ನು ನಿಷೇಧಿಸುತ್ತದೆ. ಆದರೂ 14 ವರ್ಷಗಳಿಗಿಂತ ಕಡಿಮೆಯಿಲ್ಲದ ಆರೋಗ್ಯವಂತ ಸುಧೃಡ ಕಾಯದ ಮಕ್ಕಳನ್ನು ನೇಮಿಸಬಹುದಾಗಿದೆ.

ಒಡಂಬಡಿಕೆ ಕ್ರ.ಸಂ.113: ಎಲ್ಲಾ ವಾಣಿಜ್ಯ ಸಮುದ್ರ ಮೀನುಗಾರಿಕ ನೌಕೆಗಳಿಗೆ ಅನ್ವಯಿಸುವ ಆದರೆ ಸಮುದ್ರದಲ್ಲಿ 3 ದಿನಗಳಿಂದ ಹೆಚ್ಚು ಇರದ ನೌಕೆಗಳನ್ನು ಹೊರತು ಪಡಿಸಿ, ಮೀನುಗಾರರು ಅವನು / ಅವಳು ದೈಹಿಕವಾಗಿ ಅವರನ್ನು ನೇಮಿಸಿರುವ ಕಾಯಕಕ್ಕೆ ಸಮರ್ಥರಿದ್ದಾರೆಂದು ಧೃಡಪಡಿಸುವ ಪ್ರಮಾಣ ಪತ್ರ ಹೊಂದಿರಬೇಕು.

ಒಡಂಬಡಿಕೆ ಕ್ರ.ಸಂ.114: ಇದು ವಾಣಿಜ್ಯ ಸಮುದ್ರ ಮೀನುಗಾರಿಕಾ ನೌಕೆಗಳಲ್ಲಿ ಕೆಲವು ವಿಧದ ನೌಕೆಗಳಿಗೆ ಕಾರ್ಮಿಕ ಮತ್ತು ನಿಯೋಜಕರ ಪ್ರತಿನಿಧಿಗಳ ಸಲಹೆ ಪಡೆದು, ಶರ್ತಬದ್ಧವಾಗಿ ಈ ಒಡಂಬಡಿಕೆಯ ನಿಭಂದನೆಗಳಿಂದ ವಿನಾಯತಿ ನೀಡುವ ಅವಕಾಶ ನೀಡುತ್ತದೆ. ಇದರಂತೆ ಮೀನುಗಾರಿಕಾ ನೌಕೆಯ

ಮಾಲಿಕ ಮತ್ತು ಕಾರ್ಮಿಕ ಇವರ ಪ್ರತಿನಿಧಿಗಳೊಡನೆ ಚರ್ಚಿಸಿ ಈ ವಿನಾಯತಿಯು ನಿಶ್ಚಿತ ಅಥವಾ ಅನಿಶ್ಚಿತ ಅವಧಿ ಯಾ ಒಂದು ಮೀನುಗಾರಿಕೆಯ ಯಾನ / ಪ್ರವಾಸಕ್ಕೆ ಮಾತ್ರ ಅನ್ವಯಿಸುವುದೇ ಎಂಬುದನ್ನು ಮತ್ತು ಅದಕ್ಕೆ ಆ ದೇಶದ ಕಾನೂನು ಒಪ್ಪಿಗೆ ನೀಡುವುದಾದರೆ ಮಾತ್ರ ಈ ವಿನಾಯತಿಯನ್ನು ನೀಡಬಹುದು, ಅದಕ್ಕೆ ಸಂಬಂಧಿಸಿದ ನಿಭಂದನೆಗಳನ್ನೊಳಗೊಂಡ ಒಪ್ಪಂದಕ್ಕೆ ಮಾಲಿಕ ಮತ್ತು ಕಾರ್ಮಿಕ ಪ್ರತಿನಿಧಿಗಳು ಇಬ್ಬರೂ ಸಹಿಹಾಕುವ ಅಗತ್ಯವಿದೆ. ಇದಕ್ಕೆ ಸಂಬಂಧಿಸಿದ ಉಪಬಂಧಗಳು ಈ ಯಾನದಲ್ಲಿ ಮೀನುಗಾರರಿಗೆ ಕೊಡಮಾಡುವ ಸಾಮಗ್ರಿಗಳ ಒಟ್ಟು ಮೊತ್ತ ಮತ್ತು ಮೀನುಗಾರರಿಗೆ ನೀಡುವ ಸಂಭಾವನೆ ಹಾಗೂ ಪ್ರಸ್ತುತ ಒಪ್ಪಂದವನ್ನು ಕೊನೆಗಳಿಸುವ ಷರತ್ತುಗಳನ್ನು ಒಳಗೊಂಡಿರಬೇಕು.

1966 ರ ಮೀನುಗಾರಿಕಾ ಒಡಂಬಡಿಕೆಯಲ್ಲಿ "ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ 2007", ಇದನ್ನು ನಿಗದಿತ ದಿನಾಂಕಕ್ಕಿಂತ ಮುಂಚಿತವಾಗಿ ರಚಿಸುವ ನಿರ್ಣಯ ತೆಗೆದುಕೊಳ್ಳಲಾಯಿತು.ಅವೆಂದರೆ ಮೀನುಗಾರರ ಸಾಮರ್ಥ್ಯ ಪ್ರಮಾಣ ಪತ್ರ ಒಡಂಬಡಿಕೆ 1966 (ಕ್ರ.ಸಂ.125) ಮತ್ತು ಮೀನುಗಾರಿಕಾ ನೌಕೆಯ ನೌಕರರ (ಮೀನುಗಾರರ) ವಸತಿ ಒಡಂಬಡಿಕೆ 1966 (ಕ್ರ.ಸಂ. 126). ಇವೆರಡೂ ಇತರ ಕೆಲವು ವಿಷಯಗಳೊಂದಿಗೆ, ಸಮುದ್ರ ತೀರದಲ್ಲಿ ಮೀನುಗಾರಿಕೆ ನಡೆಸುತ್ತಿರುವ ಮತ್ತು 25 ಟನ್ನಿಗಿಂತ ಕಡಿಮೆ ಭಾರ ನೋಂದಾಯಿಸಿರುವ (ಗ್ರೋಸ್ ರಿಜಿಸ್ಟರ್ಡ್ ಟನ್ನೇಜ್ – ಜಿ.ಅರ್.ಟಿ) ನೌಕೆಗಳಿಗೆ ವಿನಾಯಿತಿ ನೀಡಿದ್ದವು. ಎರಡನೆಯ ಒಡಂಬಡಿಕೆಯು 13.7 ಮೀಟರಿಗಿಂತ ಕಡಿಮೆ ಉದ್ದದ ನೌಕೆಗಳಿಗೂ ವಿನಾಯತಿ ನೀಡಿತ್ತು. ನಿಶ್ಚಿತವಾಗಿ ಮೇಲಿನ ಎರಡೂ ಒಡಂಬಡಿಕೆಗಳು ಕೈಗಾರಿಕಾ ಮೀನುಗಾರಿಕೆ ನಡೆಸುವ ನೌಕೆಗಳಗೆ ಮಾತ್ರ ಅನ್ವಯವಾಗುತ್ತವೆ.

ಒಡಂಬಡಿಕೆ ಸಂಖ್ಯೆ 125 ರಲ್ಲಿ ಒಡಂಬಡಿಕೆಯನ್ನು ಸ್ಥಿರೀಕರಿಸಿದ ಸದಸ್ಯ ರಾಷ್ಟ್ರಗಳು ಮೀನುಗಾರಿಕೆ ದೋಣಿಗಳೊಳಗೆ ಕರ್ತವ್ಯವನ್ನು ಪಾಲಿಸುವ ಸ್ಕಿಪ್ಪರ್, ಮೇಟ್ ಅಥವಾ ಇಂಜಿನಿಯರ್‌ಗಳ ಸಾಮರ್ಥ್ಯ ಧೃಡೀಕರಣಕ್ಕಾಗಿ ಅರ್ಹತೆಗೆ ಮಾನದಂಡ ಸ್ಥಾಪಿಸಲು ನಿಶ್ಚಯಿಸಿದೆ. ಒಡಂಬಡಿಕೆ ಸಂಖ್ಯೆ 126 ನಾವಿಕ ಸಮೂಹ ಮತ್ತು ವಸತಿ ಸೌಲಭ್ಯ ಒದಗಿಸಲು ಸೂಚಿಸಿದೆ.

ವೃತ್ತಿ ಶೀಕ್ಷಣ (ಮೀನುಗಾರ) ಶಿಫಾರಸ್ಸು 1966 (ಸಂಖ್ಯೆ 126) ವಿವಿಧ ವಿಷಯಗಳಾದ ನೌಕಾ ಸಂಚಾರ, ಮೀನುಗಾರಿಕೆ, ಮೀನುಗಾರಿಕೆ ದೋಣಿಗಳ ದುರಸ್ತಿ ಮತ್ತು ನಿರ್ವಹಣೆ ಮತ್ತು ಸಮುದ್ರದಲ್ಲಿ ಸುರಕ್ಷತೆಗಳ ಬಗ್ಗೆ ಮೀನುಗಾರರಿಗೆ ಸಾಮಾನ್ಯ ತರಬೇತಿ ನೀಡಲು ಕೇಂದ್ರೀಕರಿಸಿದೆ.

ಕೆಲವು ಸಮುದ್ರ ಒಡಂಬಡಿಕೆಗಳು ವಾಣಿಜ್ಯ ಸಮುದ್ರ ಮೀನುಗಾರಿಕೆಗೆ ಅನ್ವಯಿಸುವ ವ್ಯವಸ್ಥೆಗಳನ್ನು ಹೊಂದಿರುತ್ತದೆ. ಹೀಗೆ, ನೌಕಾ ಯಜಮಾನ ದಾಯತ್ವ (ಅಸ್ವಸ್ಥ ಮತ್ತು ಗಾಯಗೊಂಡ ನಾವಿಕ) ಒಡಂಬಡಿಕೆ 1936 (ಸಂ.55) ತೀರದ ಮೀನುಗಾರಿಕೆ ದೋಣಿಗಳು ಹೊರತುಪಡಿಸಿದ ಮೀನುಗಾರಿಕೆ ದೋಣಿಗಳಿಗೆ ಅನ್ವಯಿಸಿದೆ. ಹಾಗೆಯೇ, ನಾವಿಕರ ಕ್ಷೇಮಾಭಿವೃದ್ಧಿ ಒಡಂಬಡಿಕೆ 1987 (ಸಂ.163); ಆರೋಗ್ಯ ಸಂರಕ್ಷಣೆ ಮತ್ತು ವೈದ್ಯಕೀಯ ಸಹಾಯ (ನಾವಿಕರ) ಒಡಂಬಡಿಕೆ, 1987(ಸಂ.164); ಸಾಮಾಜಿಕ ಭದ್ರತೆ (ನಾವಿಕರ) ಒಡಂಬಡಿಕೆ (ಪರಿಷ್ಕೃತ), 1987 (ಸಂ.165); ನಾವಿಕರ ಪುನರ್ದೇಶಾವರ್ತನ ಒಡಂಬಡಿಕೆ (ಪರಿಷ್ಕೃತ), 1987 (ಸಂ.166); ಕಾರ್ಮಿಕರ ನಿರೀಕ್ಷಣೆ (ನಾವಿಕರ) ಒಡಂಬಡಿಕೆ 1966 (ಸಂ.178); ನಾವಿಕರ ನೇಮಕಾತಿ ಮತ್ತು ಸ್ಥಳ ನಿರ್ಣಯ ಒಡಂಬಡಿಕೆ, 1966 (ಸಂ.179) ಮತ್ತು ನಾವಿಕರ ಕೆಲಸದ ವೇಳೆ ಹಾಗೂ ಹಡಗುಗಳಲ್ಲಿ ಅವರ ನಿಯೋಗ ಒಡಂಬಡಿಕೆ, 1996 (ಸಂ.180) ಸಹ ವಾಣಿಜ್ಯ ಮೀನುಗಾರಿಕೆ ದೋಣಿಗಳಿಗೆ ಅನ್ವಯಿಸುತ್ತದೆ.

* **ಮೀನುಗಾರಿಕೆಗೆ ಹೊಸ ಕಾರ್ಮಿಕ ಮಟ್ಟವನ್ನು ಅಭಿವೃದ್ಧಿ ಪಡಿಸಲು ಅಂತರ ರಾಷ್ಟ್ರೀಯ ಕಾರ್ಮಿಕ ಸಂಘಟನೆಯು ಏನು ಮಾಡಿದೆ?**

**2002ರ ಮಾರ್ಚ ತಿಂಗಳಲ್ಲಿ ಐ.ಎಲ್.ಓ.ದ ಆಡಳಿತ ಮಂಡಳಿಯು ಅದರ 283ನೆ ಅಧಿವೇಶನದ ಕಾರ್ಯಸೂಚಿಯಲ್ಲಿ ಮೀನುಗಾರಿಕಾ ವಲಯದ ಕಾಯಕದ ಸಮಗ್ರ ಗುಣಮಟ್ಟದ ಕುರಿತಾದ – ಒಂದು ಒಡಂಬಡಿಕೆ ಮತ್ತು ಅದಕ್ಕೆ ಪೂರಕವಾದ ಶಿಫಾರಸು – ಇದನ್ನು ಸೇರಿಸಿತು. ಈ ಹೊಸ ಗುಣಮಟ್ಟವು, ಈ ಕುರಿತಾದ ಐ.ಎಲ್.ಓ. ದ ಹಿಂದಿನ 7 ಸಲಕರಣೆ (ಇನ್‌ಸ್ಟ್ರುಮೆಂಟ್)ಗಳಲ್ಲಿ – 1966ರ ಮೀನುಗಾರರ ಸಾಮರ್ಥ್ಯ ಪ್ರಮಾಣ ಪತ್ರದ ಒಡಂಬಡಿಕೆಯ ಹೊರತಾದ ಇತರ 6 ಸಲಕರಣೆಗಳನ್ನು ಪರಿಷ್ಕರಿಸುವ ಪರಿಸ್ಥಿತಿ ನಿರ್ಮಿಸಿತು. ಮೀನುಗಾರಿಕಾ ನೌಕೆಗಳಲ್ಲಿ ಕಾರ್ಯನಿರತರಾಗಿರುವ ಕಾರ್ಮಿಕರಿಗೆ ಸಂಬಂಧಿಸಿರುವ ಹೊಸ ವಿಷಯ – ಎಂದರೆ ಔದ್ಯೋಗಿಕ ಸುರಕ್ಷಿತತೆ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆ ಇತ್ಯಾದಿಗಳನ್ನು ಸೇರಿಸಬೇಕಾಯಿತು.**

**ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007(ಸಿ 188)– ಇದನ್ನು ಮತ್ತು ಅದಕ್ಕೆ ಪೂರಕವಾದ ಮೀನುಗಾರಿಕಾ ಕಾಯಕ ಶಿಪಾರಸುಗಳು 2007 (ಆರ್ 199) ಇವನ್ನು ಐ.ಎಲ್.ಓ. ದ ಜಿನೇವಾದಲ್ಲಿ ಜೂನ್ 2007 ನಡೆದ 96ನೆಯ ಅಧಿವೇಶನದಲ್ಲಿ ಪ್ರಸ್ತಾವಿತ ಒಡಂಬಡಿಕೆ ಮತ್ತು ಶಿಪಾರಸುಗಳನ್ನು ಅಂಗೀಕರಿಸಲಾಯಿತು. ಇದಕ್ಕೆ ಮೊದಲು ಐ.ಎಲ್.ಓ.ದ ಮೀನುಗಾರಿಕಾ ವಲಯಕ್ಕಾಗಿ ನೇಮಿತವಾದ ಸಮಿತಿಯ 2004 ಮತ್ತು 2005ರ 2 ಅಧಿವೇಶನಗಳಲ್ಲಿ ಇವೆರಡರ ಪಠ್ಯದ ಮೇಲೆ ಸಾಕಷ್ಟು ಚರ್ಚೆ ನಡೆದು, ಮತ್ತೆ ಪುನಃ 2007ರ ಐ.ಎಲ್.ಓ.ದ ಮೀನುಗಾರಿಕಾ ವಲಯ ಸಮಿತಿಯ ಸಭೆಯಲ್ಲಿ ಇನ್ನೂ ಕೆಲವು ಸದಸ್ಯ ರಾಷ್ಟ್ರ ಮತ್ತು ಕಾರ್ಮಿಕ ಗುಂಪುಗಳಿಂದ ಸೂಚಸಲ್ಪಟ್ಟ ಕೆಲವು ಬದಲಾವಣೆಗಳನ್ನು ಆ ಪಠ್ಯದಲ್ಲಿ ಸೇರಿಸಲಾಗಿತ್ತು.**

**ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಯು ಒಟ್ಟು 10 ಸದಸ್ಯ ರಾಷ್ಟ್ರಗಳು, 8 ಕರಾವಳಿ ರಾಷ್ಟ್ರಗಳು ಸೇರಿದಂತೆ ಅಂತರ ರಾಷ್ಟ್ರೀಯ ಕಾರ್ಮಿಕರ ಸಂಘಟನೆಯಲ್ಲಿ ತಮ್ಮ ಸ್ಥಿರೀಕರಣಗಳನ್ನು ನೋಂದಾಯಿಸಿದ ದಿನಾಂಕದಿಂದ 12 ತಿಂಗಳುಗಳ ನಂತರ ಜಾರಿಗೆ ಬರುತ್ತದೆ.**




**4. ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ – 2007**

*** ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007, ರ ವಿಶೇಷ ಮಹತ್ವ ಏನು?**

**ಐ.ಎಲ್.ಓ. ಇದರ ಮೂಲಕ ಮೀನು ಕಾರ್ಮಿಕ ಗುಣಮಟ್ಟ ಸ್ವೀಕರಿಸಿ 40 ವರ್ಷಗಳು ಕಳೆದರೂ ಆ ಒಡಂಬಡಿಕೆಗಳ ಧೃಢೀಕರಣ ಮಾತ್ರ ಬಹಳ ಮಂದಗತಿಯಲ್ಲಿ ಸಾಗಿದೆ. ಅದಲ್ಲದೆ ಈ ಹಿಂದಿನ ಮೀನುಗಾರಿಕೆಗೆ**

ಸಂಬಂಧಿಸಿದ ಉಪಕರಣಗಳು ಈಗ ಪ್ರಸ್ತುತವಲ್ಲ. ಇವುಗಳನ್ನು ಇಂದು ಬದಲಾಗುತ್ತಿರುವ ಮೀನುಗಾರಿಕಾ ಕಾರ್ಯಾಚರಣೆಗಳನ್ನು ಪ್ರತಿಬಿಂಬಿಸುವ ನಿಟ್ಟಿನ ಸೂಕ್ತ ಬದಲಾವಣೆಗಳನ್ನು ಮಾಡಲಾಗಿದೆ. ವಾಣಿಜ್ಯ ಸಮುದ್ರ ಮೀನುಗಾರಿಕೆಗೆ ಅನ್ವಯಿಸುವ ಒಡಂಬಡಿಕೆಗಳೂ ಈಗ ಪ್ರಸ್ತುತವಲ್ಲ. 2006ರ ಸಮುದ್ರ ಕಾರ್ಮಿಕ ಒಡಂಬಡಿಕೆಯ ಆಗ ಜಾರಿಯಲ್ಲಿದ್ದ ಸಮುದ್ರ ಒಡಂಬಡಿಕೆಗಳನ್ನು ತಿದ್ದುಪಡಿ ಮಾಡುವಾಗ ಮೀನುಗಾರಿಕೆ ನೌಕೆಗಳನ್ನು ಅದರ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದು ಮೇಲ್ಕಾಣಿಸಿದ ಮೀನು ಕಾರ್ಮಿಕ ಗುಣಮಟ್ಟವನ್ನು ಪುನರ್ ವ್ಯಾಖ್ಯಾನಿಸಿ, ಅದು ಮೀನುಗಾರಿಕ ನೌಕೆಗಳಿಗೂ ಅನ್ವಯಿಸುವಂತೆ ಒಡಂಬಡಿಕೆಯಲ್ಲಿ ಸೂಕ್ತ ನಿಭಂದನೆಗಳನ್ನು ಅಳವಡಿಸಿದೆ. ಇದರಿಂದಾಗಿ ಈಗ ಗುಣಮಟ್ಟ ನಿಗದಿ ಪಡಿಸುವ ವ್ಯವಸ್ಥೆಗಳು ಕಳೆದ ನಾಲ್ಕು ದಶಕಗಳಲ್ಲಿ ಮೀನುಗಾರಿಕೆ ವಲಯದಲ್ಲಾಗಿರುವ ಬದಲಾವಣೆಗಳನ್ನು ಬಿಂಬಿಸುತ್ತವೆ ಮತ್ತು ಎಮ್.ಎಲ್.ಸಿ. ಯ ವ್ಯಾಪ್ತಿಯಿಂದ ಮೀನುಗಾರಿಕೆ ನೌಕೆಗಳನ್ನು ಹೊರಗಿಡಲಾದ ಶೂನ್ಯತೆಯನ್ನು ಭರಿಸಿದಂತೆಯೂ ಆಗುತ್ತದೆ.

ಇಂದಿನ ಪ್ರಸ್ತುತ ಆರ್ಥಿಕತೆ ಮತ್ತು ವಾಣಿಜ್ಯದ ಜಾಗತೀಕರಣ ಸಂದರ್ಭದಲ್ಲಿ ಅನೇಕ ಮುಂದುವರಿಯುತ್ತಿರುವ ದೇಶಗಳ ಮೀನುಗಾರಿಕೆ ನೌಕೆಗಳು ಅವುಗಳ ದೇಶಗಳ ಸಮುದ್ರದಲ್ಲಿ ಮಾತ್ರವಲ್ಲದೆ ದೂರ ಸಮುದ್ರದಲ್ಲಿ ಅಲ್ಲದೆ ಇತರ ದೇಶಗಳ ಸಮುದ್ರದಲ್ಲಿಯೂ ಮೀನುಗಾರಿಕೆ ನಡೆಸುತ್ತಲಿವೆ. ಅಲ್ಲದೆ ಇಂದು ಮುಂದುವರಿಯುತ್ತಿರುವ ದೇಶಗಳ ಮೀನುಗಾರರನ್ನು ಔದ್ಯಮೀಕೃತ ದೇಶಗಳ ಮೀನುಗಾರಿಕೆ ನೌಕೆಗಳಲ್ಲಿ ನೇಮಿಸುವುದರಲ್ಲಿ ಪೂರ್ವ ನಿದರ್ಶನವಿಲ್ಲದ ಹೆಚ್ಚಳ ಕಂಡಿದೆ.

ಇಂತಹ ಪರಿಸ್ಥಿತಿಯಲ್ಲಿ ಐ.ಎಲ್.ಒ. “ಇತರ ವೃತ್ತಿಗಳೊಡನೆ ಹೋಲಿಸಿದಾಗ ಒಂದು ಅಪಾಯಕಾರಿ ವೃತ್ತಿ” ಎಂದು ಗುರುತಿಸಿರುವ ಮೀನುಗಾರಿಕೆ ಕಾರ್ಮಿಕ ವರ್ಗದ ಆಯಾಮಗಳನ್ನು ಅರ್ಥಪೂರ್ಣವಾಗಿ ಅವಲೋಕಿಸುವ ನಿಟ್ಟಿನಲ್ಲಿ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದು ಸೂಕ್ತ ಸಲಕರಣೆಗಳನ್ನು ಒದಗಿಸುವ, ಮತ್ತು, ನೌಕೆಗಳ ಒಳಗೆ ವಸತಿ ಹಾಗು ಕೆಲಸದ ಸೌಕರ್ಯಗಳ ಗುಣಮಟ್ಟವನ್ನು ಸುಧಾರಿಸುವ ನಿಭಂದನೆಗಳನ್ನು ಹೊಂದಿದೆ.

ಐ.ಎಲ್.ಒ. ದ ಮೀನುಗಾರಿಕೆಗೆ ಸಂಬಂಧಿಸಿದ ಯಾವುದೇ ಉಪಕರಣಗಳ ಇತಿಹಾಸದಲ್ಲಿಯೇ ಪ್ರಥಮ ಬಾರಿಗೆ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007, ಇದು ಜೀವನೋಪಾಯ ಮತ್ತು ಮನೋರಂಜನೆಗಾಗಿ ಮಾಡುವ ಮೀನುಗಾರಿಕೆ ಹೊರತುಪಡಿಸಿ, ನದಿ, ಕಾಲುವೆ, ಸರೋವರಗಳಲ್ಲಿ ನಡೆಸುವ ಮೀನುಗಾರಿಕೆಯನ್ನೂ ಒಳಗೊಂಡಿರುವ ಎಲ್ಲ ತರಹದ ಮೀನುಗಾರಿಕೆಯ ಕಾರ್ಯಾಚರಣೆಗಳಲ್ಲಿ ವಿಸ್ತರಣೆಯ ಅವಕಾಶ ನೀಡುತ್ತದೆ. ಮುಖ್ಯವಾಗಿ ಒಳನಾಡು ಮತ್ತು ಸಮುದ್ರ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆ ಇವನ್ನೆಲ್ಲ ತನ್ನ ಕಾರ್ಯವ್ಯಾಪ್ತಿಯೊಳಗಡೆ ತಂದ ಐ.ಎಲ್.ಒ. ದ ಮೀನುಗಾರಿಕೆಗೆ ಸಂಬಂಧಿಸಿದ ಮೊದಲ ಸಲಕರಣೆಯಾಗಿದೆ. ಹೀಗೆ, ಈ ಒಡಂಬಡಿಕೆಯು ದೊಡ್ಡ ಹಾಗು ಸಣ್ಣ ಪ್ರಮಾಣದ ಮೀನುಗಾರಿಕೆ ದೋಣಿಗಳು, ತೆರೆದ ಮತ್ತು ಡೆಕ್ ಇರುವ, ಹಾಗೂ ಅದರಲ್ಲಿ ಕೆಲಸ ಮಾಡುವ ಮೀನುಗಾರರು ಇವರೆಲ್ಲರಿಗೂ ಅನ್ವಯಿಸುತ್ತದೆ.

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಡಿ ಪ್ರಮುಖ ಅಗತ್ಯತೆಗಳೇನು?

ಈ ಒಡಂಬಡಿಕೆಯನ್ನು ಸ್ಥಿರೀಕರಿಸುವ ರಾಷ್ಟ್ರಗಳು ಅವರ ಮೀನುಗಾರಿಕೆ ನೌಕೆಗಳ ಸುರಕ್ಷಿತ ಯಾನ ಹಾಗೂ ಕಾರ್ಯಾಚರಣೆಗಾಗಿ ಮತ್ತು ಒಟ್ಟು ನಿರ್ವಹಣೆಗಾಗಿ ಅಗತ್ಯವಿರುವ ನಿರ್ದಿಷ್ಟ ಬೇಡಿಕೆಗಳನ್ನು ದಾಖಲಿಸಬೇಕಾಗುತ್ತದೆ. ಐ.ಎಲ್.ಒ.ದ ಸದಸ್ಯರಿಗೆ, ಮೀನುಗಾರಿಕೆ ನೌಕೆಗಳಲ್ಲಿ ಕಾರ್ಯವೆಸಗುವ ಸಲುವಾಗಿ ಅಗತ್ಯವಿರುವ ಕನಿಷ್ಟ ಗುಣಮಟ್ಟ ನಿರ್ಧರಿಸಲು ಅಗತ್ಯವಿದೆ

ಮೀನುಗಾರಿಕಾ ನೌಕೆಗಳಲ್ಲಿ ಕೆಲಸ ಮಾಡುವರೆ ಕನಿಷ್ಠ ಅಗತ್ಯತೆಗಳು

- ಮೀನುಗಾರಿಕಾ ನೌಕೆಗಳಲ್ಲಿ ನೇಮಿಸಲ್ಪಡುವ ತರುಣರ ಆರೋಗ್ಯ, ಸುರಕ್ಷಿತತೆ ಮತ್ತು ನೈತಿಕತೆ ಕಾಪಾಡಿಕೊಳ್ಳುವ ಸಲುವಾಗಿ, ಕನಿಷ್ಠ ವಯೋಮಿತಿ ನಿಗದಿ.
- ಮೀನುಗಾರರು ನೌಕೆಗಳಲ್ಲಿ ಕೆಲಸ ಮಾಡಲು ಸಶಕ್ತರಿರುವುದನ್ನು ಖಾತ್ರಿ ಪಡಿಸಲು ಆರೋಗ್ಯ ತಪಾಸಣೆ;

ಸೇವಾ ಷರತ್ತುಗಳು.

- ನೌಕೆಗಳ ಸುರಕ್ಷಿತತೆ ಕೇಂದ್ರೀಕೃತ ಯಾನ ಹಾಗೂ ಕಾರ್ಯಾಚರಣೆಗಳ ಯೋಗ್ಯ ನಿರ್ವಹಣೆ.
- ಮೀನುಗಾರರ ಸುರಕ್ಷಿತತೆ ಮತ್ತು ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ನಿಗದಿತ ಸಮಯದಲ್ಲಿ ಸಾಕಷ್ಟು ವಿರಾಮ
- ನೌಕೆ ಬಂದರದಿಂದ ಹೊರಡುವ ಮೊದಲು ಅದರಲ್ಲಿರುವ ಕಾರ್ಮಿಕರ ಪಟ್ಟಿ ತಯಾರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡುವುದಲ್ಲದೆ ಅದರ ಪ್ರತಿ ಹಡಗಿನಲ್ಲಿಯೂ ಲಭ್ಯವಿರುವಂತೆ ನೋಡಿಕೊಳ್ಳುವುದು.
- ನೌಕೆಯೊಳಗೆ ಕೆಲಸ ಮತ್ತು ವಸತಿಯ ಜಾಗದಲ್ಲಿ ಕನಿಷ್ಠ ಸೌಲಭ್ಯಗಳ ಲಭ್ಯತೆಯ ಬಗ್ಗೆ ಮೀನುಗಾರರ ಜೊತೆ ಒಪ್ಪಂದ ತಯಾರಿಸುವುದು
- ಪರದೇಶಗಳ ಬಂದರಗಳಿಂದ ಸ್ವದೇಶಕ್ಕೆ ವಾಪಸಾತಿಯ ಭರವಸೆ
- ಮೀನುಗಾರರ ನೇಮಕಾತಿ ಹಾಗು ಕೆಲಸದ ಜವಾಬ್ದಾರಿಗಳ ನಿಗದಿ
- ಮೀನುಗಾರರಿಗೆ ಕ್ಲಪ್ತ ಸಮಯದಲ್ಲಿ ಮತ್ತು ನಿರಂತರವಾಗಿ ಸಂಬಳ ದೊರಕಿಸುವ ವ್ಯವಸ್ಥೆ

ವಸತಿ ಮತ್ತು ಆಹಾರ

- ನೌಕೆಯೊಳಗೆ ವಸತಿ, ಆಹಾರ ಮತ್ತು ನೀರಿನ ಪೂರೈಕೆ

ಸಾಮಾಜಿಕ ಭದ್ರತೆ, ಆರೋಗ್ಯ ರಕ್ಷಣೆ ಮತ್ತು ಔಷಧೋಪಚಾರ.

- ನೌಕೆಯು ಸಮುದ್ರದಲ್ಲಿರುವಾಗ ವೈದ್ಯಕೀಯ ನೆರವು, ತೀವ್ರ ಕಾಯಿಲೆ ಅಥವಾ ಗಂಭೀರ ಗಾಯಗೊಂಡಿದ್ದಲ್ಲಿ ಕ್ಲಪ್ತ ಸಮಯದಲ್ಲಿ ದಡಕ್ಕೆ ಸಾಗಿಸುವ ಮತ್ತು ಅಲ್ಲಿ ಸೂಕ್ತ ವೈದ್ಯಕೀಯ ನೆರವು ಮತ್ತು ಚಿಕಿತ್ಸೆ ಪಡೆಯುವ ಹಕ್ಕು.
- ಔದ್ಯೋಗಿಕ ಅವಘಡಗಳು ಮತ್ತು ಕಾಯಿಲೆ ಮತ್ತು ಕಾಯಕಕ್ಕೆ ಸಂಬಂಧಿಸಿದ ಅಪಾಯಗಳಿಂದ ರಕ್ಷಣೆಗೆ ಪೂರ್ವಸಿದ್ಧತೆ ಅಲ್ಲದೆ ನೌಕೆ ಸಮುದ್ರದಲ್ಲಿರುವಾಗ ಸಂಭಾವ್ಯ ಅಪಾಯಗಳ ಮೌಲ್ಯಮಾಪನ ಮತ್ತು ನಿರ್ವಹಣೆ.
- ಮೀನುಗಾರಿಕಾ ವಿಧಾನ ಮತ್ತು ಪರಿಕರಗಳ ಬಳಕೆ, ಕಾರ್ಯಾಚರಣೆಗಳ ಬಗ್ಗೆ ಮೀನುಗಾರರಿಗೆ ತರಬೇತಿ.
- ನೌಕೆ ಸಮುದ್ರದಲ್ಲಿರುವಾಗ ಅವಘಡಗಳ ಬಗ್ಗೆ ವರದಿ ನೀಡುವುದು ಮತ್ತು ತನಿಖೆ.
- ಮೀನುಗಾರರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಸಾಮಾಜಿಕ ಭದ್ರತೆಯ ಲಾಭಗಳು ದೊರೆಯುವುದನ್ನು ಖಚಿತಗೊಳಿಸುವುದು, ಇತರ ವಲಯಗಳ ಕಾರ್ಮಿಕರಿಗೆ ದೊರೆಯುತ್ತಿರುವ ಸೌಲಭ್ಯಗಳಿಗೆ ಕಡಿಮೆಯಾಗದಂತೆ, ಎಲ್ಲಾ ಮೀನುಗಾರರಿಗೆ ದೊರೆಯುವ ನಟ್ಟಿನಲ್ಲಿ ಸೂಕ್ತ ಷರತ್ತುಗಳುಳ್ಳ

ಪರಿಪೂರ್ಣ ಸಾಮಾಜಿಕ ಭದ್ರತಾ ರಕ್ಷಣೆ ಮತ್ತು ಈ ತೆರನಾದ ಸಾಮಾಜಿಕ ಭದ್ರತೆಯ ಹಕ್ಕುಗಳ ನಿರಂತರತೆಯನ್ನು ಕಾಯ್ದುಕೊಳ್ಳವುದು

- ಕೆಲಸದ ಸಮಯದಲ್ಲಿ ಆಗಬಹುದಾದ ಅನಾರೋಗ್ಯ, ಅವಘಡ ಮತ್ತು ಮೃತ್ಯು ಇತ್ಯಾದಿಗಳಗೆ ಸೂಕ್ತ ರಕ್ಷಣೆ ಮತ್ತು ಮೀನುಗಾರರಿಗೆ ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ನೆರವು ಇವೆಲ್ಲದಕ್ಕೆ ಮೀನುಗಾರಿಕಾ ನೌಕೆಗಳ ಮಾಲಿಕರು ಜವಾಬ್ದಾರರಾಗಿರುವ ನಿಭಂದನೆಗಳು.

ಪಾಲನಾ ಮತ್ತು ಅಮಲು ಜಾರಿ

- ದೋಣಿಗಳ ಮೇಲೆ ಕ್ಷೇತ್ರ ಅಧಿಕಾರ ಚಲಾವಣೆ ಮತ್ತು ನಿಯಂತ್ರಣವನ್ನು ಒಡಂಬಡಿಕೆಯಲ್ಲಿ ಅಡಕವಾಗಿರುವ ಎಲ್ಲ ಷರತ್ತುಗಳ ಅನುಸರಣೆಯನ್ನು ಖಾತ್ರಿ ಪಡಿಸುವ ಒಂದು ವ್ಯವಸ್ಥೆಯ ನಿರ್ಮಾಣ.

ಮೇಲಿನ ಎಲ್ಲ ನಿಭಂದನೆಗಳು ಅನ್ವಯಿಸುವ ನೌಕಾ/ಮೀನುಗಾರಿಕಾ ವರ್ಗಗಳು.

1. 24 ಮೀ. ಮತ್ತು ಅದಕ್ಕಿಂತ ಹೆಚ್ಚು ಉದ್ದವಿರುವ ಮೀನುಗಾರಿಕಾ ನೌಕೆಗಳು
2. ಸಾಮಾನ್ಯವಾಗಿ 7 ದಿನಗಳಿಗಿಂತ ಅಧಿಕ ದಿನ ಸಮುದ್ರದಲ್ಲಿ ಇರುವ ಮೀನುಗಾರಿಕೆ ನೌಕೆಗಳು ಯಾ
3. ದೂರ ಸಮುದ್ರ ಮೀನುಗಾರಿಕಾ ಕಾರ್ಯಾಚರಣೆ ನಡೆಸುವ ನೌಕೆಗಳು. ಅದೂ ಅಲ್ಲದೆ ಯಾವುದೇ ರಾಷ್ಟ್ರದ ಅಧಿಕಾರಿಗಳು ಈ ಒಡಂಬಡಿಕೆಯ ವ್ಯಾಪ್ತಿಯಿಂದ ಹೊರಗಿಟ್ಟಿರುವ ನೌಕೆಗಳ ಹೊರತಾಗಿ ಇತರ ಎಲ್ಲ ಮೀನುಗಾರಿಕಾ ನೌಕೆಗಳು ಮತ್ತು ಅವುಗಳಲ್ಲಿ ನಿಯೋಜಿತರಾಗಿವವರು.

* ಈ ಉದ್ದೇಶಗಳನ್ನು ಸಾಧಿಸುವ ನಿಟ್ಟಿನಲ್ಲಿ ಒಡಂಬಡಿಕೆಯ ನಿರ್ದಿಷ್ಟ ನಿಲುವು/ ಪದಾವಳಿಗಳೇನು?

ಈ ಒಡಂಬಡಿಕೆಯು 9 ಭಾಗಗಳಲ್ಲಿ ವಿಸ್ತರಿಸಿರುವ (ಪಾರ್ಟ್)ಗಳ ಒಟ್ಟು 54 ಅನುಚ್ಛೇದ (ಆರ್ಟಿಕಲ್)ಗಳೊಂದಿದ್ದು, 3 ಅನುಭಂಧ (ಎನೆಕ್ಸ್)ಗಳಿವೆ.

ಭಾಗ **I** ಪರಿಭಾಷೆಗಳನ್ನು (ಡೆಫಿನಿಶನ್) (ಅನುಚ್ಛೇದ 1) ಮತ್ತು ಅವಕಾಶ (ಅನುಚ್ಛೇದ 2,3,4 ಮತ್ತು 5) ಗಳನ್ನು ವ್ಯವಹರಿಸುತ್ತದೆ.

ಭಾಗ **II** –ಸಾಮಾನ್ಯ ತತ್ವಗಳು, ಎಂದರೆ ಅನುಷ್ಟಾನ (ಅನುಚ್ಛೇದ 6), ಸಕ್ಷಮ ಪ್ರಾಧಿಕಾರ ಮತ್ತು ಸಮನ್ವಯ (ಅನುಚ್ಛೇದ 7), ಮೀನುಗಾರಿಕೆ ನೌಕೆಗಳ ಮಾಲೀಕರ, ಸ್ಕಿಪ್ಪರುಗಳ ಮತ್ತು ಮೀನುಗಾರರ ಜವಾಬ್ದಾರಿಗಳು (ಅನುಚ್ಛೇದ 8),

ಭಾಗ **III** ಮೀನುಗಾರಿಕಾ ನೌಕೆಗಳಲ್ಲಿರಬೇಕಾದ ಕಾಯಕ ಸಂಬಂಧಿಸಿದ ಕನಿಷ್ಟ ಸೌಕರ್ಯಗಳು, ಎಂದರೆ ಕನಿಷ್ಟ ವಯೋಮಿತಿ (ಅನುಚ್ಛೇದ 9) ಮತ್ತು ಆರೋಗ್ಯ ತಪಾಸಣೆ (ಅನುಚ್ಛೇದ 10, 11, 12)ಗಳನ್ನು ವ್ಯವಹರಿಸುತ್ತದೆ.

**IV**ನೆಯ ಭಾಗದಲ್ಲಿ ಸೇವಾ ಷರತ್ತುಗಳನ್ನು ವ್ಯವಹರಿಸುತ್ತದೆ, **V**ನೆಯ ಭಾಗದಲ್ಲಿ ವಸತಿ ಮತ್ತು ಆಹಾರ (ಅನುಚ್ಛೇದ 25ರಿಂದ 28) ಭಾಗ **VI** ವೈದ್ಯಕೀಯ ನೆರವು, ಆರೋಗ್ಯ ರಕ್ಷಣೆ ಮತ್ತು ಸಾಮಾಜಿಕ ಭದ್ರತೆ ಗಳನ್ನೊಳಗೊಂಡಿದೆ.
ಭಾಗ **IV** ಮತ್ತು **VI** ಈ ಒಡಂಬಡಿಕೆಯ ಅತಿ ದೀರ್ಘವಾದ ಭಾಗಗಳಾಗಿರುತ್ತದೆ. ಭಾಗ **IV** ರಲ್ಲಿ ನಿರ್ವಹಣೆ ಮತ್ತು ವಿರಾಮದ ಅವಧಿ(ಅನುಚ್ಛೇದ 13,14), ಕಾರ್ಮಿಕರ ಪಟ್ಟಿ(ಅನುಚ್ಛೇದ 15) ಮೀನುಗಾರರ ಕಾಯಕ ಒಪ್ಪಂದ (ಅನುಚ್ಛೇದ 16,17,18,19 ಮತ್ತು 20), ಸ್ವದೇಶಕ್ಕೆ ವಾಪಸಾತಿ(ಅನುಚ್ಛೇದ 21),

ನೇಮಕಾತಿ ಮತ್ತು ನಿಯೋಜನೆ(ಅನುಚ್ಛೇದ 22) ಮತ್ತು ಮೀನುಗಾರರಿಗೆ ವೇತನ ಪಾವತಿ(ಅನುಚ್ಛೇದ 23,24) .

**VI** ನೇ ಭಾಗವು ವೈದ್ಯಕೀಯ ಸೇವೆ (ಅನುಚ್ಛೇದ 29,30) ಔದ್ಯೋಗಿಕ ಸುರಕ್ಷಿತತೆ , ಅರೋಗ್ಯ ಮತ್ತು ಅವಘಡ ತಡೆ(ಅನುಚ್ಛೇದ 31–33) ಸಾಮಾಜಿಕ ಭದ್ರತೆ(ಅನುಚ್ಛೇದ 34–37) ಕೆಲಸಕ್ಕೆ ಸಂಬಂಧಿಸಿದ ಅನಾರೋಗ್ಯ, ಗಾಯ ಮತ್ತು ಮರಣ ಇವುಗಳಿಂದ ರಕ್ಷಣೆ(ಅನುಚ್ಛೇದ 38– 39)

**VII** ನೆಯ ಭಾಗ ದಲ್ಲಿ ಅನುಸರಣೆ ಮತ್ತು ಕಡ್ಡಾಯ ಅನುಷ್ಠಾನ (ಅನುಚ್ಛೇದ 40–44), .

**VIII** ನೆಯ ಭಾಗದಲ್ಲಿ ಅನುಬಂಧ Iರ ತಿದ್ದುಪಡಿ (ಆಳತೆಗಳಲ್ಲಿ ಸಮಾನತೆ), ಅನುಬಂಧ **II** ರ ತಿದ್ದುಪಡಿ (ಮೀನುಗಾರರ ಕಾಯಕ ಒಪ್ಪಂದ) ಅನುಬಂಧ **III** ರ ತಿದ್ದುಪಡಿ. ಭಾಗ **IX** ಅಂತಿಮ ಉಪಬಂಧಗಳು(ಪ್ರೊವಿಜನ್)ಗಳು.

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರ ವಿನ್ಯಾಸಗಳೇನು?

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಚೌಕಟ್ಟು ಎರಡು ಸ್ತರಗಳಲ್ಲಿದೆ. ಒಂದು ಕಡೆಯಲ್ಲಿ ಇದಕ್ಕೆ ಪೂರ್ವ ನಿರ್ಧಾರಿತ ಗುಣಮಟ್ಟವು ಇದೆ. (i) 24 ಮೀಟರುಗಳಿಗಿಂತ ಅಧಿಕ ಉದ್ದವಿರುವ ನೌಕೆಗಳಿಗಾಗಿ, (ii) ಸಮುದ್ರದಲ್ಲಿ 7 ದಿನಗಳಿಗಿಂತ ಹೆಚ್ಚು ದಿನ ಕಾರ್ಯವೆಸಗುವ ನೌಕೆಗಳು. (iii) ಸಮುದ್ರ ತೀರದಿಂದ 200 ನಾವಿಕ(ನಾಟಿಕಲ್) ಮೈಲುಗಳಿಗಿಂತ ಅಧಿಕ ದೂರದಲ್ಲಿ ಯಾನ ಮಾಡುವ ನೌಕೆಗಳು ಅಥವ (iv) ಖಂಡಾವರಣ (ಕಾಂಟಿನೆಂಟಲ್ ಶೆಲ್ಫ್) ದ ಬಾಹ್ಯ ಬದಿಯ ಆಚೆಯಿಂದ ಚಲಾಯಿಸಲ್ಪಡುವ ನೌಕೆಗಳು, ಮತ್ತ (v) ಈ ನೌಕೆಗಳಲ್ಲಿ ಕಾರ್ಯ ನಿರತರಾಗಿರುವ ಮೀನುಗಾರರು. ಇನ್ನೊಂದು ಕಡೆಯಲ್ಲಿ ಬದಲಾಯಿಸಬಲ್ಲ ಗುಣಮಟ್ಟಗಳೂ ಇವೆ ಅವೆಂದರೆ ಈ ಒಡಂಬಡಿಕೆಯ ವ್ಯಾಪ್ತಿಯಲ್ಲಿ ಬರುವ ಬಾಕಿ ಉಳಿದ ನೌಕೆಗಳಿಗೆ ಮತ್ತು ಅವುಗಳಲ್ಲಿ ಕೆಲಸ ಮಾಡುವ ಮೀನುಗಾರರಿಗೆ. ಈ ಒಡಂಬಡಿಕೆಯ ನಿಭಂದನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಸದಸ್ಯ ರಾಷ್ಟ್ರಗಳಗೆ ಅಗತ್ಯವಿರುವ ಕಾನೂನು, ನಿಯಂತ್ರಣಗಳು ಅಥವಾ ಇನ್ನು ಯಾವುದೇ ಕಾರ್ಯಕ್ರಮಗಳನ್ನು ಬಳಸಬಹುದು. ಸದಸ್ಯ ರಾಷ್ಟ್ರಗಳು ಕಸಬುದಾರ ಮೀನುಗಾರರು ಮತ್ತು ಚಿಕ್ಕ ಸ್ತರದ ಮೀನುಗಾರರು ಬಳಸುವ ಆಥವಾ ಇನ್ನು ಯಾವುದೇ ವಿಧದ ಮೀನುಗಾರಿಕಾ ನೌಕೆಗಳನ್ನು ಈ ಮೀನುಗಾರಿಕಾ ಕಾರ್ಮಿಕ ಗುಣಮಟ್ಟದ ಪ್ರಯೋಜನ ಪಡೆಯುವ ಸಲುವಾಗಿ ಶಿಫಾರಸು ಮಾಡುವ ಅಗತ್ಯವಿದೆ. ಅಲ್ಲದೆ ಇನ್ನು ಕೆಲವು ನಿಗದಿತ ವಿಧದ ಮೀನುಗಾರಿಕಾ ದೋಣಿಗಳಿಗೆ ಸಂಬಂಧ ಪಟ್ಟಂತೆ ಈ ಒಡಂಬಡಿಕೆಯ ಕೆಲವು ಉಪಬಂಧ (ಪ್ರೊವಿಜನ್)ಗಳ "ಕ್ರಮಿಕ ಅನುಷ್ಠಾನ " ಮಾಡುವ ನಿಭಂದನೆಗಳನ್ನು ನೀಡಲಾಗಿದೆ.

* "ಕ್ರಮಿಕ ಅನುಷ್ಠಾನ" (Progressive implementation) ಸಮೀಪನ ಎಂದರೇನು?

"ಕ್ರಮಿಕ ಅನುಷ್ಠಾನ" ಇದರ ಅರ್ಥ ನಿರೂಪಣೆ ಸ್ಪಷ್ಟವಾಗಿ ಮಾಡಿರದಿದ್ದರೂ ಈ ಒಡಂಬಡಿಕೆಯ ಕೆಲವು ಹೆಸರಿಸಲ್ಪಟ್ಟ ಉಪಬಂಧಗಳನ್ನು ಅನುಷ್ಠಾನಗೊಳಿಸಲು ನಿಗದಿತ ಅವಧಿಗಿಂತ ಹೆಚ್ಚು ಕಾಲಾವಕಾಶ ತೆಗೆದುಕೊಳ್ಳುವ ಅವಕಾಶ ಎಂದು ಅರ್ಥೈಸಿಕೊಳ್ಳ ಬಹುದು. ಈ ಒಡಂಬಡಿಕೆಯು ಕೆಳಗೆ ನಮೂದಿಸಲಾದ ವಿಧದ ವ್ಯಾಪ್ತಿಯಲ್ಲಿ ಬರುವ ನೌಕೆಗಳಿಗೆ ಈ "ಕ್ರಮಿಕ ಅನುಷ್ಟಾನ" ದ ನಿಭಂದನೆಗಳು ಅನ್ವಯವಾಗುತ್ತವೆ.

(i) 24 ಮೀಟರುಗಳಿಗಿಂತ ಕಡಿಮೆ ಉದ್ದದ ನೌಕೆಗಳು

(ii) 7 ದಿನಗಳಿಗಿಂತ ಕಡಿಮೆ ಅವಧಿಯವರೆಗೆ ಸಮುದ್ರ ಯಾನ ಮಾಡುವ ನೌಕೆಗಳು

ಮತ್ತು/ ಅಥವ (iii) ದೂರ ಸಮುದ್ರದಲ್ಲಿ ಮೀನುಗಾರಿಕೆ ಮಾಡದ ನೌಕೆಗಳು

ಮತ್ತು ಇಂತಹ ನೌಕೆಗಳಲ್ಲಿ ಕಾಯಕ ಮಾಡುತ್ತಿರುವ ಮೀನುಗಾರರು.

ಈ "ಕ್ರಮಿಕ ಅನುಷ್ಠಾನದ" ಮಾರ್ಗವು ಈ ಕೆಳಗಿನ ಉಪಬಂದಗಳಿಗೆ ಮಾತ್ರ ಸೀಮಿತವಾಗಿದೆ.

* ತಮ್ಮ ಶಾರೀರಿಕ ಕ್ಷಮತೆಯ ಬಗ್ಗೆ ಸೂಕ್ತ ವೈದ್ಯಕೀಯ ಪ್ರಮಾಣ ಪತ್ರ ಹೊಂದಿರುವ ಮತ್ತು 24 ಮೀಟರುಗಳಿಗಿಂತ ಕಡಿಮೆ ಉದ್ದದ ನೌಕೆಗಳಲ್ಲಿ ಕೆಲಸ ಮಾಡುವ ಮೀನುಗಾರರು.


* ನೌಕೆಯಲ್ಲಿರುವ ಸಿಬ್ಬಂದಿಗಳ ಪಟ್ಟಿ ಲಭ್ಯವಿರುವ ನೌಕೆಗಳು

* ನೌಕೆಯೊಳಗೆ ಯೋಗ್ಯ ಕಾಯಕ ಮತ್ತು ವಸತಿ ಸೌಕರ್ಯ ಲಭ್ಯತೆಯುನ್ನು ಖಾತ್ರಿ ಪಡಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಮೀನುಗಾರ ಮತ್ತು ನೌಕೆಯ ಮಾಲಿಕರು ಸಹಿಮಾಡಿರುವ ಲಖಿತ ಕಾಯಕ ಒಪ್ಪಂದ,

* ಮೀನುಗಾರರು ಭಾಗವಹಿಸಿರುವ, ಸಂಭಾವ್ಯ ಅವಘಡಗಳ ವಿಶ್ಲೇಷಣೆ ಮತ್ತು

* ಕಾಯಕ ಸಂಬಂಧಿಸಿದ ಅನಾರೋಗ್ಯ, ಗಾಯ ಯಾ ಮೃತ್ಯು ಸಂಭವಿಸಿದಲ್ಲಿ ಮೀನುಗಾರರಿಗೆ ವೈದ್ಯಕೀಯ ನೆರವು, ಯೋಗ್ಯ ಪರಿಹಾರ ಲಭ್ಯತೆಗಾಗಿ ನೌಕೆಗಳ ಮಾಲಿಕರು ಜವಾಬ್ದಾರರಾಗಿರುವ ವ್ವವಸ್ಥೆ ಯಾ ಕಡ್ಡಾಯ ವಿಮೆ ಇರುವುದನ್ನು ಐ.ಎಲ್.ಒ.ದ ಸದಸ್ಯರು ನೋಡಿಕೊಳ್ಳಬೇಕು.

ಈ "ಕ್ರಮಿಕ ಅನುಷ್ಠಾನ" ಮಾರ್ಗವು ಮೇಲ್ಕಾಣಿಸಿದ ಮೂರೂ ವರ್ಗದ ನೌಕೆಗಳ ಮಾಲಿಕರಿಗೆ ಅನುಕೂಲಕರವಾಗಿದ್ದು, ಅದರಲ್ಲೂ ಮುಖ್ಯವಾಗಿ ಸದಸ್ಯ ರಾಷ್ಟ್ರಗಳಿಗೆ "ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ 2007 ರ ಅನುಸರಣೆ ಗೈಯಲು, ಮತ್ತು ಈ ಒಡಂಬಡಿಕೆಯ ಸವಲತ್ತುಗಳ ಮುಂದುವರಿಸಲ್ಪಟ್ಟ ಕಾಲ ಮಿತಿಯಲ್ಲಿ ಅನುಷ್ಠಾನಕ್ಕೆ ಅನುವು ಮಾಡಿ ಕೊಡುತ್ತದೆ. ಇಂತಹ ವಿಧಾನವು ಒಡಂಬಡಿಕೆಯ ಸಾರ್ವತ್ರಿಕ ಅನುಸರಣೆಯ ಸಾಧ್ಯತೆಗೆ ಸಹಕರಿಸುತ್ತದೆ. ಏಕೆಂದರೆ ಇದು ಈ ಒಡಂಬಡಿಕೆಯ ಅನುಷ್ಠಾನಕ್ಕೆ ತಡೆಯೊಡ್ಡಬಹುದಾದ, ಕೆಲವು ರಾಷ್ಟ್ರಗಳ ಮೂಲಭೂತ ಸೌಕರ್ಯಗಳ ಮತ್ತು ಸಾಂಸ್ಥಿಕ ಕೊರತೆ ಸಮಸ್ಯೆ ನಿವಾರಣೆಗೆ ಸಹಕಾರಿಯಾಗಿರುತ್ತದೆ.




**5. ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆ.**

*** ಸಣ್ಣ ಪ್ರಮಾಣದ ಮೀನುಗಾರಿಕೆಗೂ ಕಾರ್ಮಿಕ ಮಟ್ಟವನ್ನು ಪರಿಗಣಿಸುವುದು ಯಾಕೆ ಮುಖ್ಯವಾಗಿರುತ್ತದೆ?**

1960 ರ ನಂತರ ತಾಂತ್ರಿಕತೆಯಲ್ಲಾದ ಬೆಳವಣಿಗೆಗಳು ಮೀನುಗಾರಿಕೆಯ ಮತ್ತು ನೌಕೆಗಳ ಸಾರ್ವತ್ರಿಕ ಯಾಂತ್ರೀಕರಣಕ್ಕೆ ದಾರಿ ಮಾಡಿ ಕೊಟ್ಟವು. ಇದು ಸಣ್ಣ ಪ್ರಮಾಣದ ಮತ್ತು ಸಾಂಪ್ರದಾಯಿಕ ಮೀನುಗಾರಿಕೆಯ

ಕಾರ್ಯಾಚರಣೆಯ ವ್ಯಾಪ್ತಿಯ ಹೆಚ್ಚಳಕ್ಕೆ ಕಾರಣವಾಯಿತು. ಅದರ ಜೊತೆಯಲ್ಲಿ ಸಣ್ಣ ಪ್ರಮಾಣದ ಮೀನುಗಾರಿಕಾ ನೌಕೆಗಳಲ್ಲಿಯೂ ಉತ್ತಮ ಕಾಯಕ ಹಾಗು ವಸತಿ ಸೌಕರ್ಯಗಳ ಗುಣಮಟ್ಟದಲ್ಲಿ ಗಣನೀಯ ಬದಲಾವಣೆಗಳಾದವು ಅಥವಾ ಬದಲಾವಣೆಗಳನ್ನು ಮಾಡುವ ಅಗತ್ಯ ಉಂಟಾಯಿತು.

1970ರ ದಶಕದಲ್ಲಿ ಕರಾವಳಿ ಇರುವ ದೇಶಗಳು ಸಮುದ್ರ ತೀರದಿಂದ 200 ನಾಟಿಕಲ್ ಮೈಲಿನವರೆಗಿನ ಸಮುದ್ರವನ್ನು ತಮ್ಮ ವಿಶಿಷ್ಠ ಆರ್ಥಿಕ ವಲಯ ಅಥವಾ ವಿಶಿಷ್ಠ ಮೀನುಗಾರಿಕೆ ವಲಯ ಎಂದು ಘೋಷಿಸಿರುವುದರ ಜೊತೆಯಲ್ಲಿ, ಮೀನುಗಾರಿಕೆ ಮತ್ತು ನೌಕಾ ಯಾನ ಎರಡರಲ್ಲೂ ಆದ ತಾಂತ್ರಿಕ ಬೆಳವಣಿಗೆಗಳು ದೊಡ್ಡ ಮತ್ತು ಸಣ್ಣ ಪ್ರಮಾಣದ ಮೀನುಗಾರಿಕೆಗೆ ಈ ವಲಯದಲ್ಲಿ ಪೂರ್ವ ನಿದರ್ಶನವಿಲ್ಲದ ಅವಕಾಶಗಳು ಮತ್ತು ವಿಸ್ತರಣೆಗೆ ಕಾರಣವಾದವು. ಈಗ ಚಿಕ್ಕ ನೌಕೆಗಳೂ ನೌಕಾ ಯಾನದ ಹೊಸ ಸಲಕರಣೆಗಳ ಸಹಾಯದಿಂದ ದೂರ ಸಮುದ್ರದಲ್ಲಿ ಬಹು ದಿನಗಳ ಮೀನುಗಾರಿಕಾ ಕಾರ್ಯಾಚರಣೆ ನಡೆಸಲಾರಂಭಿಸಿದವು. ಇದು ಈ ಸಣ್ಣ ಪ್ರಮಾಣದ ನೌಕೆಗಳಲ್ಲಿಯೂ ದೊಡ್ಡ ನೌಕೆಗಳಲ್ಲಿರುವ ಕೆಲಸ ಮತ್ತು ವಸತಿ ಸೌಕರ್ಯಗಳ ಗುಣಮಟ್ಟಕ್ಕೆ ಏರಿಸುವ ಅನಿವಾರ್ಯತೆಯನ್ನು ಎತ್ತಿ ತೋರಿಸಿತು. ಈಗ 24 ಮೀಟರುಗಳಿಗಿಂತ ಕಡಿಮೆ ಉದ್ದದ ನೌಕೆಗಳ ಮೀನುಗಾರಿಕಾ ಕಾರ್ಯಾಚರಣೆಗಳಲ್ಲಿ ಮಾಲಿಕ ಕಾರ್ಮಿಕರ ವ್ಯವಸ್ಥೆಯಲ್ಲಿ ಬದಲಾವಣೆ ಆಗಿರುವುದಲ್ಲದೆ ಈಗ ಹೆಚ್ಚಿನ ಮೀನುಗಾರಿಕಾ ಕಾರ್ಯಾಚರಣೆಗಳು ಔದ್ಯಮಿಕ ವಿಧಾನಗಳನ್ನು ಹೋಲುತ್ತಿರುವುದನ್ನು ಕಾಣಬಹುದು.

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007, ಇದರ ಮೂಲಕ ಚಿಕ್ಕ ನೌಕೆಗಳಲ್ಲಿ ಅದರಲ್ಲೂ ಮುಂದುವರಿಯುತ್ತಿರುವ ದೇಶಗಳಲ್ಲಿ ಕಾರ್ಮಿಕರ ಸೌಕರ್ಯಗಳನ್ನು ಕಡೆಗಣಿಸುವುದನ್ನು ತಡೆ ಹಿಡಿಯುವುದು ಸಾಧ್ಯ. ಜಾಗತಿಕ ನೆಲೆಯಲ್ಲಿ ಸಣ್ಣ ಪ್ರಮಾಣದ ಮೀನುಗಾರಿಕೆ ಸಹಿತ ಎಲ್ಲ ಕಡೆ ಕಾರ್ಮಿಕರ ಕಾಯಕ ಮತ್ತು ವಸತಿ ಸೌಕರ್ಯಗಳನ್ನು ಸುಧಾರಿಸುವ ನಿಟ್ಟಿನಲ್ಲಿ ಒಂದು ಕಾನೂನು ಚೌಕಟ್ಟಿನ ಅಗತ್ಯವಿದೆ ಎನ್ನುವುದು ಸ್ಪಷ್ಠ.

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಿಂದ ಸಾಂಪ್ರದಾಯಿಕ ಮತ್ತು ಸಣ್ಣ ಪ್ರಮಾಣದ ಮೀನುಗಾರರು ಮತ್ತು ಮೀನುಗಾರಿಕೆ ದೋಣಿಗಳಿಗೆ ಸಿಗುವ ಲಾಭವೇನು?

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದು ಸ್ಪಷ್ಟವಾಗಿ ದೊಡ್ಡ ಯಾ ಸಣ್ಣ ಪ್ರಮಾಣದ ಅಥವಾ ಸಾಂಪ್ರದಾಯಿಕ ಮೀನುಗಾರರು, ಯಾ ಅವರ ನೌಕೆಗಳನ್ನು ಹೆಸರಿಸದಿದ್ದರೂ ಅದು ಹೆಸರಿಸಿರುವ ಅಪವಾದ, ರೀಯಾಯತಿ, ಮತ್ತು ಪ್ರಸ್ತುತ ಒಡಂಬಡಿಕೆಯು ಅದರ ವ್ಯಾಪ್ತಿಯಿಂದ ಹೊರಗಿಟ್ಟಿರುವ ಪ್ರಾಕಾರಗಳನ್ನು ಹೊರತು ಪಡಿಸಿ, ಇತರ ಎಲ್ಲಾ ವಿಧದ ಮೀನುಗಾರಿಕಾ ಕಾರ್ಯಾಚರಣೆಗಳನ್ನು ಒಳಗೊಂಡಿರುತ್ತದೆ. ಸಣ್ಣ ಪ್ರಮಾಣದ ಮೀನುಗಾರಿಕಾ ನೌಕೆಗಳಿಗೆ ಲಾಭದಾಯಕವಾಗುವ ಸಾಧ್ಯತೆಗಳನ್ನು ಹೊಂದಿರುವ ಈ ಒಡಂಬಡಿಕೆಯ ಷರತ್ತುಗಳು :

- ಕನಿಷ್ಟ ವಯೋಮಿತಿ ನಿಗದಿತ ಗುಣಮಟ್ಟ,
- ಆರೋಗ್ಯ ತಪಾಸಣೆ.
- ಸಿಬ್ಬಂದಿಗಳ ಪಟ್ಟಿ
- ನಿಯಮಿತ ವಿರಾಮದ ಅವಧಿ
- ಕಾಯಕ ಒಪ್ಪಂದ
- ನಿಯಮಿತ ಸಂಬಳ ಪಾವತಿ

- ನೌಕೆಯೊಳಗೆ ವಸತಿ, ಆಹಾರ ಮತ್ತು ಶುದ್ಧ ಕುಡಿಯುವ ನೀರು ಇವುಗಳ ಲಭ್ಯತೆ.
- ನೌಕೆಯಲ್ಲಿ ಒಬ್ಬ ಪ್ರಥಮ ಚಿಕಿತ್ಸೆಯಲ್ಲಿ ತರಬೇತಿ ಪಡೆದಿರುವ ಯಾ ಅರ್ಹತೆ ಇರುವ ಮೀನುಗಾರನ ಉಪಸ್ಥಿತಿ ಸೇರಿದಂತೆ ವೈದ್ಯಕೀಯ ಉಪಕರಣಗಳು, ಔಷಧಿ ಲಭ್ಯತೆ
- ಅಗತ್ಯ ಬಿದ್ದಲ್ಲಿ ತೀರದಲ್ಲಿ ಚಿಕಿತ್ಸೆ ಪಡೆಯುವ ಹಕ್ಕು
- ನೌಕೆಯೊಳಗೆ ಕೆಲಸಕ್ಕೆ ಸಂಭಂದಿಸಿದ ಅವಘಡ, ಅನಾರೋಗ್ಯ ಮತ್ತು ಸಂಭಾವ್ಯ ಸಮಸ್ಯೆಗಳಿಗೆ ತಡೆ.
- ಮೀನುಗಾರಿಕೆಯಲ್ಲಿ ಬಳಸಲ್ಪಡುವ ಎಲ್ಲ ತರದ ಸಾಧನಗಳ ಬಳಕೆಯ ತರಬೇತಿ
- ನೌಕೆಯಲ್ಲ ಆದ ಅವಘಡಗಳ ವಿಶ್ಲೇಷಣೆ ಮತ್ತು ವರದಿ ತಯಾರಿ
- ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ನೆರವು ಮತ್ತು
- ಸಾಮಾಜಿಕ ಭದ್ರತೆ.

ಆದರೆ ಸಣ್ಣ ಪ್ರಮಾಣದ ಮತ್ತು ಸಾಂಪ್ರದಾಯಿಕ ಮೀನುಗಾರಿಕಾ ಕಾರ್ಯಾಚರಣೆಗಳು ಮೇಲ್ಕಾಣಿಸಿದ ನಿಬಂಧನೆಗಳಿಂದ ಲಾಭ ಪಡೆಯುವುದು, ಆ ವಿಧದ ಮೀನುಗಾರಿಕೆಯು ಒಡಂಬಡಿಕೆಯ ವ್ಯಾಪ್ತಿಯೊಳಗೆ ತರಲ್ಪಟ್ಟಿದೆಯೋ ಎಂಬುದರ ಮೇಲೆ ನಿರ್ಭರವಾಗಿದೆ.ಈ ತರದ ಸಣ್ಣ ಪ್ರಮಾಣದ ಮೀನುಗಾರಿಕೆಯು ಪ್ರಸ್ತುತ ಒಡಂಬಡಿಕೆಯ ಲಾಭ ಪಡೆಯುವ ಸಾದ್ಯತೆಗಳು ಆಯಾ ಸದಸ್ಯ ರಾಷ್ಟ್ರ ಮಟ್ಟದಲ್ಲಿ ನಿರ್ಧರಿಸಲ್ಪಡುತ್ತದೆ.


*** ಎಲ್ಲಾ ವರ್ಗದ ಮೀನುಗಾರರು ಮತ್ತು ಮೀನುಗಾರಿಕೆ ನೌಕೆಗಳನ್ನು ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಒಳಪಡಿಸಿದೆಯೆ?**

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಲ್ಲಿ "ಮೀನುಗಾರ" ಶಬ್ದದ ಅರ್ಥ ನಿರೂಪಣೆಯಲ್ಲಿ "ಮೀನುಗಾರಿಕೆ ನಿರತನಾಗಿರುವ ಯಾ ಈ ಕ್ಷೇತ್ರದಲ್ಲಿ ಉದ್ಯೋಗಿಯಾಗಿರುವ ಇಲ್ಲವೆ ಮೀನುಗಾರಿಕೆ ನೌಕೆಯಲ್ಲಿ ವೇತನ ಯಾ ಹಿಡಿದ ಮೀನಿನಲ್ಲಿ ಪಾಲು ದೊರೆಯುವ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಮೀನುಗಾರಿಕೆಯಲ್ಲಿ ಸ್ವ-ಉದ್ಯೋಗಿಯಾಗಿರುವನು ಎಂದು ವ್ಯಾಖ್ಯಾನಿಸಲಾಗಿದೆ. ಎಂದರೆ ಬರೇ ಮೀನುಗಾರರು ಮಾತ್ರವಲ್ಲ, ನೌಕೆಗಳಲ್ಲಿ ಮೀನು ಸಂಸ್ಕರಣೆಯಲ್ಲಿ ನಿರತರಾಗಿರುವವರೂ ಈ ಒಡಂಬಡಿಕೆಯ ವ್ಯಾಪ್ತಿಯೊಳಗೆ ಬರುತ್ತಾರೆ. ಆದರೆ ಈ ಒಡಂಬಡಿಕೆಯು ಒಳನಾಡು ಮೀನುಗಾರಿಕೆ ಮತ್ತು ಕೆಲವು ವಿಧದ ಸಮುದ್ರ ಮೀನುಗಾರಿಕೆ ಮತ್ತು ನೌಕೆಗಳನ್ನು ಅವುಗಳ ಗಾತ್ರ, ಸಮುದ್ರ ಯಾನದ ಅವಧಿ, ಮೀನುಗಾರಿಕೆ ನಡೆಸುವ ಪ್ರದೇಶ ಮತ್ತು ಕೆಲವು ನಿರ್ದಿಷ್ಟ ವಿಧಾನದ ಮೀನುಗಾರಿಕೆಗಳನ್ನು ತನ್ನ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಹಾಗಿದ್ದರೂ 24 ಮೀಟರುಗಳಿಗಿಂತ ಕಡಿಮೆ ಉದ್ದದ ಆದರೆ ಸಮುದ್ರದಲ್ಲಿ ಒಂದು ವಾರಗಳಿಗಿಂತಲೂ ಅಧಿಕ ದಿನವಿರುವ ಮತ್ತು 200 ನಾವಿಕ ಮೈಲುಗಳಿಗಿಂತ ದೂರದ ಸಮುದ್ರದಲ್ಲಿ ಯಾ ಖಂಡಾವರಣದ (ಕಾಂಟಿನೆಂಟಲ್ ಶೆಲ್ಫ್‌ನ) ಹೊರಬದಿಯಲ್ಲಿ ಮೀನು ಹಿಡಿವ ನೌಕೆಗಳನ್ನು ಹೊರತು ಪಡಿಸಿಲ್ಲ.

*** ಸಮುದ್ರ ತೀರಗಳಾಧಾರಿತ ಮೀನುಗಾರಿಕಾ ಚಟುವಟಿಕೆಯಲ್ಲಿ ನಿರತರಾಗಿರುವವರಿಗೂ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಿಂದ ಪ್ರಯೋಜನವಾಗುತ್ತದೆಯೇ?**

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರಲ್ಲಿ "ಮೀನುಗಾರ" ಶಬ್ದದ ಅರ್ಥ ನಿರೂಪಣೆಯಲ್ಲಿ ಸಮುದ್ರ ತೀರದಲ್ಲಿ ಮೀನು ಹಿಡಿಯುವ, ಎಂದರೆ ಹೆಚ್ಚಾಗಿ ಯಾವುದೇ ನೌಕೆ ಬಳಸದೆ ಮೀನು ಹಿಡಿಯುವ

ಮೀನುಗಾರರು, ಡೈವ್ ಮಾಡುವವರು, ಕೈ ರಂಪಣಿ ಬಲೆ ಎಳೆಯುವವರು, ಸಮುದ್ರ ಸಸ್ಯಗಳನ್ನು ಕೊಯ್ಲು ಮಾಡುವವರು, ಬಲೆ ಬೀಸುವವರು, ಇತರ ತೀರದ ಬಲೆ ಬಳಸುವವರು, ಮತ್ತು ಅಂತರ್ ಉಬ್ಬರವಿಳಿತದ ಪ್ರದೇಶದಲ್ಲಿ ಬರಿಗಾಲಿನಲ್ಲಿ ಮೀನು ಹಿಡಿಯುವವರು – ಅವರು ಇಡೀ ದಿನ ಕೆಲಸ ಮಾಡುತ್ತಿದ್ದರೂ ಸಹ, ಅಲ್ಲದೆ ಅವರಲ್ಲಿ ಕಾರ್ಮಿಕ, ಮಾಲಿಕರೆಂಬ ಸ್ಪಷ್ಟ ವಿಭಾಗವಿದ್ದರೂ ಈ ಒಡಂಬಡಿಕೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.




* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಡಿ ಒಳಪಡುವ ಮೀನುಗಾರರಿಗೆ ಒದಗುವ ಸೌಲಭ್ಯಗಳಿಗೆ ಸಮಾನವಾದ ಸೌಲಭ್ಯಗಳನ್ನು ಸಮುದ್ರ ತೀರಗಳಾಧಾರಿತ ಮೀನುಗಾರರಿಗೂ ದೊರೆಯುವಂತೆ ಕಚಿತಪಡಿಸಿಕೊಳ್ಳಲು ಮೀನುಗಾರರು ಮತ್ತು ಇತರ ನಾಗರಿಕ ಸಂಘಟನೆಗಳೇನು ಮಾಡಬಹುದು?

ಎಲ್ಲದ್ದಕಿಂತ ಮುಖ್ಯವಾಗಿ ರಾಷ್ಟ್ರ ಮಟ್ಟದಲ್ಲ ಇಂತಹ ನೌಕೆರಹಿತ ಸಮುದ್ರ ತೀರಕ್ಕೆ ಸೀಮಿತವಾದ ದಿನವಿಡೀ ಮೀನುಗಾರಿಕೆ ಮಾಡುತ್ತಿರುವವರು, ಡೈವ್ ಮಾಡುವವರು, ಚಿಪ್ಪು ಮೀನು ಹೆಕ್ಕುವವರು, ಕೈರಂಪಣಿ ಎಳೆಯುವವರು ಮತ್ತು ಮೀನುಗಾರಿಕೆಗೆ ಸಂಬಂಧಿತ ಕೆಲಸಮಾಡುವವರು – ಇವರಲ್ಲಿ ಹೆಚ್ಚಾಗಿ ಹೆಂಗಸರು, ಇವರಿಗೆಲ್ಲ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಪ್ರಯೋಜನ ಸಿಗುವ ನಿಟ್ಟಿನಲ್ಲಿ ರಾಷ್ಟ್ರ ವ್ಯಾಪ್ತಿ ಪ್ರಚಾರ ಮಾಡಬೇಕು. ಕೆಲವಾರು ಕನಿಷ್ಟ ಅಗತ್ಯಗಳು–ಮುಖ್ಯವಾಗಿ

**i**. ಅಪಾಯಕಾರಿ ಕೆಲಸ: ಡೈವ್ ಮಾಡುವುದು, ದೊಡ್ಡ ಅಲೆಗಳ ಸೆಳೆತದ ನಡುವೆ ರಂಪಣಿ ಎಳೆಯುವವರು, ಉಬ್ಬರವಿಳಿತದ ನಡುವೆ ಚಿಪ್ಪು ಮೀನು ಹೆಕ್ಕುವವರು

**ii**. ಸೇವಾ ಗುಣಮಟ್ಟ: ಕೆಲಸದ ಒಪ್ಪಂದ, ವಿರಾಮದ ಅವದಿ, ಸಂಬಳ ಪಾವತಿಯ ವಿಧಾನ

**iii**. ಔದ್ಯೋಗಿಕ ಸುರಕ್ಷಿತತೆ ಮತ್ತು ಆರೋಗ್ಯ ರಕ್ಷಣೆ.

**iv.** ವೈದ್ಯಕೀಯ ನೆರವು ಮತ್ತು ಸಾಮಾಜಿಕ ಭದ್ರತೆ

ಇವೆಲ್ಲ ದೊರೆತರೆ ಈ ಸಮುದ್ರ ತೀರಕ್ಕೆ ಸೀಮಿತವಾದ ಮೀನುಗಾರಿಕೆ ನಡೆಸುವವರ ಕಾಯಕ ಮತ್ತು ಜೀವನದ ಗುಣಮಟ್ಟದಲ್ಲಿ ಸುಧಾರಣೆ ಆಗುವುದರಲ್ಲಿ ಸಂದೇಹವಿಲ್ಲ.




## 6. ಮುನ್ನಡೆಯುವ ಹಾದಿ

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007ರ ಅಳವಡಿಕೆ ಮತ್ತು ಸ್ಥಿರೀಕರಣಕ್ಕಾಗಿ ಸದಸ್ಯ ರಾಷ್ಟ್ರಗಳಿಂದ ಏನು ನಿರೀಕ್ಷಿಸಲಾಗಿದೆ?

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದನ್ನು ಸ್ಥಿರೀಕರಿಸಿದ ಮಾಡಿದ ರಾಷ್ಟ್ರಗಳು, ಈ ಒಡಂಬಡಿಕೆಯಲ್ಲಿ ಕೆಲವು ಬಗೆಯ ನೌಕೆ ಮತ್ತು ಮೀನುಗಾರರನ್ನು ಇದರ ವ್ಯಾಪ್ತಿಯಿಂದ ಹೊರಗಿಡಲು ಕಾರಣವೇನೆಂದು, ಮತ್ತು ಅವೆಲ್ಲರಿಗೂ ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರಲ್ಲಿ ಸಿಗುವ ಎಲ್ಲ ಸವಲತ್ತುಗಳು ದೊರೆಯುವ ನಿಟ್ಟಿನಲ್ಲಿ ತಾವೇನು ಮಾಡಬೇಕು ಎನ್ನುವುದರ ಬಗ್ಗೆ ಐ.ಎಲ್.ಒ,ಗೆ ವರದಿ ಮಾಡಬೇಕು. ಅದಲ್ಲದೆ ಅವರ ನೌಕೆಗಳ ಸುರಕ್ಷಿತ ಯಾನ ಮತ್ತು ಕಾರ್ಯಾಚರಣೆ ಅಲ್ಲದೆ ಅದರಲ್ಲಿರುವ ಮೀನುಗಾರರ ಸುರಕ್ಷಿತತೆ ಮತ್ತು ಆರೋಗ್ಯ ರಕ್ಷಣೆಗಾಗಿ ಬೇಕಾಗಿರುವ ಅವಶ್ಯಕತೆಗಳನ್ನು ನಮೂದಿಸಬೇಕು. ಇವು ಈ ಕೆಳಗಿನ ಅಂಶ ಗುಣಮಟ್ಟ ನಿರ್ಧರಿಸಲು ಅಗತ್ಯವಿದೆ.

* ಮೀನುಗಾರರ ಆರೋಗ್ಯ ಮತ್ತು ಸುರಕ್ಷಿತತೆಗಾಗಿ ನೌಕೆಯಲ್ಲಿರುವಾಗ ಸಾಕಷ್ಟು ಅವಧಿಯ ವಿರಾಮ,
* ಮೀನುಗಾರರಿಗೆ ಕ್ಲಪ್ತ ಸಮಯದಲ್ಲಿ ಸಂಬಳ ಪಾವತಿ ಮಾಡುವ ವ್ಯವಸ್ಥೆ
* ನೌಕೆಯಲ್ಲಿ ಉತ್ತಮ ಮತ್ತು ಸಾಕಷ್ಟು ವಿಶಾಲ ವಸತಿ ಒದಗಿಸುವುದು.
* ನೌಕೆಯೊಳಗೆ ವೈದ್ಯಕೀಯ ಸೇವೆ ಮತ್ತು ಆಕಸ್ಮಿಕ ಅವಘಢಗಳ ಸಂಧರ್ಭದಲ್ಲಿ ಅಗತ್ಯವಿರುವ ಪ್ರಥಮ ಚಿಕಿತ್ಸೆ ನೀಡಲು ಸೂಕ್ತ ತರಬೇತಿ/ಅರ್ಹತೆ ಪಡೆದಿರುವ ಕನಿಷ್ಟ ಒಬ್ಬ ಮೀನುಗಾರನ ಲಭ್ಯತೆ.
* ಅಗತ್ಯ ಬಿದ್ದಲ್ಲಿ ಸಮುದ್ರ ದಡದಲ್ಲಿಯೂ ವೈದ್ಯಕೀಯ ಚಿಕಿತ್ಸೆ ಪಡೆಯುವ ಮೀನುಗಾರರ ಹಕ್ಕಿನ ಮಾನ್ಯತೆ.

* ನೌಕೆಯಲ್ಲಿರುವಾಗ ಉದ್ಯೋಗ ಸಂಬಂಧಿತ ಅವಘಡ ಯಾ ರೋಗಗಳ ತಡೆ.

* ಮೀನುಗಾರಿಕಾ ನೌಕೆಗಳೊಳಗೆ ಉತ್ತಮ ಗುಣಮಟ್ಟದ ಸಾಕಷ್ಟು ಆಹಾರ ಮತ್ತು ನೀರಿನ ಲಭ್ಯತೆ.

* ಮೀನುಗಾರರು ಬಳಸ ಬೇಕಾದ ಮೀನುಗಾರಿಕಾ ವಿವಿಧ ವಿಧಾನಗಳ ಬಗ್ಗೆ ಸಾಕಷ್ಟು ಜ್ಞಾನ ಕೊಡುವುದು ಮತ್ತು ಬಳಕೆಯ ಉಪಕರಣಗಳಲ್ಲಿ ತರಬೇತಿ.

* ನೌಕೆಯೊಳಗೆ ಆದ ಅವಘಡಗಳ ವಿಚಾರಣೆ ಮತ್ತು ಆ ಬಗ್ಗೆ ವರದಿ ತಯಾರಿ.

* ಮೀನುಗಾರರಿಗೆ ಮತ್ತು ಅವರ ಕುಟುಂಬಗಳಿಗೆ ಸಾಮಾಜಿಕ ಭದ್ರತೆ, ರಕ್ಷಣೆ.

  ಮತ್ತು

* ನೌಕೆಯಲ್ಲಿ ಕಾಯಕ ಮತ್ತು ವಸತಿಗೆ ಸಂಬಂಧಿಸಿದಂತೆ ಒಡಂಬಡಿಕೆಯ ನಿಭಂದನೆಗಳ ಅನುಸರಣೆ ಆಗಿರುವ ಬಗ್ಗೆ ಸಕ್ಷಮ ಪ್ರಾಧಿಕಾರವು ತಪಾಸಣೆ ನಡೆಸಿ ನೀಡಿರುವ ದಾಖಲೆಗಳ ಲಭ್ಯತೆ.

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007ಯ ಅವಶ್ಯಕತೆಗಳ ಅನುಸರಣೆಗೆ ಸಂಬಂಧಿಸಿದಂತೆ ಸದಸ್ಯ ರಾಷ್ಟ್ರಗಳು ತಪಾಸಣೆ ಮಾಡಿ, ವರದಿ ತಯಾರಿಸಬೇಕು ಮತ್ತು ಈ ನಿಭಂದನೆಗಳ ಅನುಷ್ಟಾನದ ನಿಗಾವಣೆ ನಡೆಸುತ್ತಿರಬೇಕು ಮತ್ತು ಅಗತ್ಯ ಬಿದ್ದಲ್ಲಿ ಸೂಕ್ತ ದಂಡ ಅಲ್ಲದೆ ತಪ್ಪುಗಳನ್ನು ಸರಿಪಡಿಸಲು ಕ್ರಮ ಕೈಕೊಳ್ಳಬೇಕು. ಬಂದರು ಇರುವ ದೇಶಗಳು ಅವರ ಬಂದರಗಳಲ್ಲಿ ತಂಗುವ ನೌಕೆಗಳು ಒಡಂಬಡಿಕೆಯಲ್ಲಿರುವ ನಿಭಂದನೆಗಳನ್ನು ಪಾಲಿಸದಿದ್ದಲ್ಲಿ ಅದನ್ನು ಆಯಾ ದೇಶಗಳಿಗೆ ತಿಳಿಸಬೇಕು. ಬಂದರು ಇರುವ ದೇಶಗಳು ಕೂಡ ಅಲ್ಲಿ ತಂಗಿರುವ ನೌಕೆಯ ಗುಣಮಟ್ಟವು ಅದರಲ್ಲಿ ಕೆಲಸಮಾಡುತ್ತಿರುವ ಮೀನುಗಾರರ ಸುರಕ್ಷಿತತೆಗೆ ಅಪಾಯವೆಂದು ಅನಿಸಿದರೆ ಅದನ್ನು ತಾವೇ  ಸರಿಪಡಿಸುವ ನಿಟ್ಟಿನಲ್ಲಿ ಕ್ರಮ ಕೈಕೊಳ್ಳಬಹದು.

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ರ ಸವಲತ್ತುಗಳನ್ನು ಮುಂದುವರಿಯುತ್ತಿರುವ ದೇಶಗಳಲ್ಲಿ ಅನುಷ್ಠಾನಗೊಳಿಸಲು ಸಹಾಯ ಮಾಡುವಂತೆ ಯಾವುದಾದರು ವಿಶೇಷ ವ್ಯವಸ್ಥೆಗಳಿವೆಯೇ?

“ಕ್ರಮಿಕ ಅನುಷ್ಟಾನ ಸಮೀಪನ” ಮುಂದುವರಿಯುತ್ತಿರುವ ದೇಶಗಳಿಗೆ ಇನ್ನೂ ಕೆಲವು ವರ್ಗದ ನೌಕೆ ಮತ್ತ ಅದರಲ್ಲಿ ಕೆಲಸಮಾಡುತ್ತಿರುವ ಮೀನುಗಾರರು ಈ ಒಡಂಬಡಿಕೆಯ ಕೆಲವು ನಿಭಂದನೆಗಳ ವ್ಯಾಪ್ತಿಯೊಳಗೆ ಬರಬಹುದಾದ ಹೆಚ್ಚುವರಿ ನಮ್ಯತೆ ನೀಡುತ್ತದೆ.

* ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಸಮರ್ಪಕ ಅನುಷ್ಟಾನವನ್ನು ನಿಶ್ಚಯಿಸಿಕೊಳ್ಳಲು ಮೀನುಗಾರರು ಮತ್ತು ಇತರ ನಾಗರಿಕ ಸಂಘಟನೆಗಳೇನು ಮಾಡಬಹುದು?

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಯ ಅನುಸರಣೆ ಖಾತ್ರಿ ಯಾಗುವ ಸಲುವಾಗಿ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ನಡೆಸಬೇಕು. ಒಡಂಬಡಿಕೆಯ ಸಮರ್ಪಕ ಅನುಷ್ಟಾನಕ್ಕೆ ಸಹಕರಿಸುವ ನಿಟ್ಟಿನಲ್ಲಿ ಅಗತ್ಯ ಮಟ್ಟಗಳಲ್ಲಿ ಶಾಸನಗಳ ಸುಧಾರಣೆ ಮತ್ತು ಅಭಿವೃದ್ಧಿಗೆ ಪ್ರಾರಂಭಕ ಕಾರ್ಯಗಳನ್ನು ಕೈಗೊಳ್ಳುವುದು ಮುಖ್ಯವಾಗಿದೆ. ಒಡಂಬಡಿಕೆಯ ಪರಿಧಿಯೊಳಗೆ ಇನ್ಯಾವ ವರ್ಗದ ನೌಕೆಗಳು ಮತ್ತು ಮೀನುಗಾರರು ಬರಬೇಕು ಯಾರನ್ನು ತಾತ್ಕಾಲಿಕ ಯಾ ಹೆಚ್ಚಿನ ಅವಧಿಗೆ ಹೊರಗಿಡಬೇಕು ಎಂಬುದರ ಬಗ್ಗೆ  ಸಕ್ಷಮ ಪ್ರಾಧಿಕಾರಗಳಿಂದ, ನಿಯೋಜಕ ಮತು ಕಾರ್ಮಿಕ ಸಂಘಟನೆಗಳಿಂದ ಅಗತ್ಯವಿರುವ ಸಹಾಯ/ಸಲಹೆ ಸಲಹಗಾರರ ಯಾ ಭಾಗವಹಿಸುವ ಪ್ರತಿನಿಧಿಗಳ ನೆಲೆಯಲ್ಲಿ ಯಾಚಿಸಬಹುದು. ಉದಾ– ಯಾವುದೇ ಗಾತ್ರದ ನೌಕೆ ಇರಲಿ, ಅವು 7 ದಿನ ಹೆಚ್ಚು ಸಮುದ್ರದಲ್ಲಿ ಮೀನುಗಾರಿಕೆ ನಡೆಸುವವೇ ಅಥವಾ ಖಂಡಾವರಣದ ಹೊರಗೆ ಯಾ 200 ನಾವಿಕ ಮೈಲಿನೊಳಗೆ ಮೀನುಗಾರಿಕೆ  ನಡೆಸುತ್ತವೆ,

ಎಂಬುನ್ನು ಖಾತ್ರಿ ಪಡಿಸುವ ಅಗತ್ಯವಿದೆ. ಅಲ್ಲದೆ 24 ಮೀಟರುಗಳಿಗಿಂತ ಕಡಿಮೆ ಗಾತ್ರದ ನೌಕೆಗಳು ಮತ್ತು ಅದರಲ್ಲಿ ಕೆಲಸಮಾಡುವ ಮೀನುಗಾರರು ಈ ಒಡಂಬಡಿಕೆಯ ವ್ಯಾಪ್ತಿಯಲ್ಲಿ ಬರುವುದು ಮೀನುಗಾರಿಕಾ ಯಾನದ ಅವಧಿ, ಮೀನುಗಾರಿಕೆ ಮಾಡುವ ಪ್ರದೇಶ, ಮತ್ತು ಮೀನುಗಾರಿಕಾ ವಿಧಾನ ಇವುಗಳ ಮೇಲೆ ನಿರ್ಭರವಾಗಿದೆ. ಇದಲ್ಲದೆ ಯಾವ ಮೀನುಗಾರರು ಹಾಗೂ ಮೀನುಗಾರಿಕೆ ನೌಕೆಗಳು ಒಡಂಬಡಿಕೆಯ ಕೆಲವು ನಿಭಂದನೆಗಳ ಒಳಗೆ ಯಾ ಹೊರಗಿರಬೇಕೆಂದು ಗುರುತಿಸಬೇಕಾಗುತ್ತದೆ. ಮತ್ತು ಎಲ್ಲ ವರ್ಗದ ಮೀನುಗಾರರಿಗೆ ಅನ್ವಯಿಸುವ ಶರ್ತಗಳನ್ನೂ ಗುರುತಿಸಬೇಕಾಗುತ್ತದೆ; ಹೀಗೆ ಕನಿಷ್ಟ ವಯೋಮಿತಿ , ಸಂಬಳ ಪಾವತಿ, ಸಾಮಾಜಿಕ ಭದ್ರತೆ ಈ ಎಲ್ಲ ನಿಭಂದನೆಗಳು ಎಲ್ಲಾ ಮೀನುಗರರಿಗೆ ಅನ್ವಯಿಸುವವೆಂದು ತಿಳಿದು ಬರುತ್ತದೆ.

ಅನೇಕ ಮುಂದುವರಿಯುತ್ತಿರುವ ರಾಷ್ಟ್ರಗಳು ಮೂಲಭೂತ ಸೌಕರ್ಯಗಳ ಕೊರತೆ ಮತ್ತು ದುರ್ಬಲ ಸಂಸ್ಥೆಗಳಿಂದಾಗಿ ಸಮಸ್ಯೆಗೆ ಸಿಲುಕಿವೆ. ಇಂತಹ ಸರಕಾರಗಳ, ಕಡ್ಡಾಯ ಅನುಷ್ಟಾನದ ಕ್ಷಮತೆ ಹೆಚ್ಚಿಸುವ ಸಲುವಾಗಿ ಮೀನುಗಾರಿಕೆ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಯಾ ಸಮುದ್ರ ಮೀನುಗಾರಿಕಾ ನೌಕೆಗಳ ಸುರಕ್ಷಿತತೆ ಪ್ರಾಧಿಕಾರ ಮತ್ತು ಕಾರ್ಮಿಕ ಆಡಳಿತೆ ಸೇರಿದಂತೆ ಎಲ್ಲ ಆಯಾಮಗಳ ಪುನರ್ವಿಮರ್ಶೆಯ ಅಗತ್ಯವಿದೆ, ಇಂತಹ ಒಂದು ಬದಲಾವಣೆ ಕೈಕೊಂಡರೆ ಮಾತ್ರ ಮುಂದುವರಿಯುತ್ತಿರುವ ದೇಶಗಳಲ್ಲಿ .ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಅನುಷ್ಠಾನಕ್ಕೆ ಬೇಕಾದ ಕಾನೂನುಗಳನ್ನು ಸ್ವೀಕರಿಸುವುದು ಸಾಧ್ಯ. ಇದು ಆ ದೇಶಗಳ 24 ಮೀಟರುಗಳಿಗಿಂತ ಕಡಿಮೆ ಗಾತ್ರದ ಮೀನುಗಾರಿಕಾ ನೌಕೆಗಳು ಮತ್ತು ಅದರಲ್ಲಿ ಕೆಲಸ ಮಾಡುವ ಮೀನುಗಾರರನ್ನು, ಇಷ್ಟರ ತನಕ ಬಹುತೇಕ ಮುಂದುವರಿದ ರಾಷ್ಟ್ರಗಳಲ್ಲಿ ಆಗದಿರುವ ಹೊಸ ಕಾರ್ಮಿಕ ದೃಷ್ಟಿಕೋನದಿಂದ ನೋಡಲು ಸಾಧ್ಯವಾಗುತ್ತದೆ.





7. ಉಪಸಂಹಾರ

* ಕೆಲವು ಪರಿಸಮಾಪ್ತಿ ವಚನಗಳು

ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದು, ಮೀನುಗಾರಿಕಾ ಕ್ಷೇತ್ರದಲ್ಲಿ ಮೀನುಗಾರರ ನೇಮಕಾತಿ, ಅವರ ನೌಕೆಗಳಲ್ಲಿ ಕೆಲಸ ಮಾಡುವ ಪರಿಸರದ ಗುಣಮಟ್ಟದ ಸುಧಾರಣೆ, ಮತ್ತು ಸಾಮಾಜಿಕ ಭದ್ರತೆ, ಮುಂತಾದ ಕ್ಷೇತ್ರಗಳಲ್ಲಿನ ಕಾರ್ಮಿಕ ಗುಣಮಟ್ಟದ ಕೆಲವು ಮೂಲಗಳ ಬಗ್ಗೆ ಮಾಹಿತಿ ನೀಡುತ್ತದೆ. ಅಲ್ಲದೆ ಮೀನುಗಾರರಿಗೆ ಕಾಯಕ ಕ್ಷೇತ್ರದಲ್ಲಿ ಅಮಾನುಷ ಪರಿಸರದಿಂದ ರಕ್ಷಣೆ ನೀಡುತ್ತದೆ. ಮತ್ತು ಜಾಗತಿಕ ನೆಲೆಯಲ್ಲಿ ಸಣ್ಣ ಪ್ರಮಾಣದ ಹಾಗೂ ಬೃಹತ್ ಪ್ರಮಾಣದ ಮೀನುಗಾರಿಕಾ ಕಾರ್ಯಾಚರಣೆಯಲ್ಲಿ ಮೀನುಗಾರರ ಕಾರ್ಯಕ್ಷೇತ್ರ ಮತ್ತ ವಸತಿ ಸೌಕರ್ಯಗಳ ಗುಣಮಟ್ಟದಲ್ಲಿ ಸುಧಾರಣೆ ತರಲು ಶ್ರಮಿಸುತ್ತಿದೆ. 2004ರಲ್ಲಿ ಐ.ಎಲ್.ಓಯ ಸೆಕ್ರೆಟರಿ ಜನರಲ್ ರವರು ಮೀನುಗಾರಿಕೆ ಸಮಿತಿಯನ್ನು ಉದ್ದೇಶಿಸಿ ಮಾತನಾಡುತ್ತ ಹೀಗೆ ನುಡಿದಿದ್ದರು "ಯಾವುದೇ ಒಬ್ಬ ಮೀನುಗಾರ ಅಪ್ಪಿತಪ್ಪಿಯಾದರೂ ಈ ಒಡಂಬಡಿಕೆಯ ರಕ್ಷಣಾ ಜಾಲದಿಂದ ಹೊರಬೀಳದಿರುವುದು ಬಹು ಮುಖ್ಯ. ಇದನ್ನು ಕಾರ್ಯಗತ ಗೊಳಿಸುವರೆ ಈ ರಕ್ಷಣಾ ಜಾಲದ ರಂಧ್ರಗಳು ಸೂಕ್ತ ಪ್ರಮಾಣದ್ದಾಗಿರಬೇಕು, ಎಲ್ಲವೂ ಹೊರಬೀಳುವಷ್ಟು ದೊಡ್ಡದು ಆಗಿರಬಾರದು ಮತ್ತು ಇದರ ಅನುಸರಣೆ ಮತ್ತು ಆನುಷ್ಟಾನ ಗಳ ಮೇಲೆ ಜಾಸ್ತಿ ಒತ್ತಡ ಬೀಳುವಷ್ಟು ಚಿಕ್ಕದೂ ಆಗಿರಬಾರದು. ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ, 2007 ಇದರ ಅನುಷ್ಟಾನಕ್ಕಾಗಿ ವಿಶ್ವದಾದ್ಯಂತ ಸರಕಾರ, ಮೀನುಗಾರ ಮತ್ತು ನಿಯೋಜಕರ ಸಂಘಟನೆಗಳು ಮತ್ತು ಸರಕಾರೇತರ ಸಂಸ್ಥೆಗಳು ಜೊತೆ ಜೊತೆಯಾಗಿ ಕೆಲಸಮಾಡಬೇಕಾಗುತ್ತದೆ.

# ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ - 2007

ಈ ಕಿರು ಹೊತ್ತಗೆಯು June 2007 ರಲ್ಲಿ ಸ್ವಿಝರ್ಲೆಂಡಿನ ಜಿನೇವಾದಲ್ಲಿ ನಡೆದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಯ ೯೬ನೆಯ ಅಂತಾರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಸ್ವೀಕರಿಸಲ್ಪಟ್ಟ "ಮೀನುಗಾರಿಕೆಯಲ್ಲಿ ಕಾಯಕ ಒಡಂಬಡಿಕೆ" ಇದರ ಒಂದು  ಕ್ಷಿಪ್ರ ಮೇಲ್ನೋಟವನ್ನು ಒದಗಿಸುವ ಒಂದು ಪ್ರಯತ್ನ ಮಾತ್ರ ಹೊರತು, ಇದನ್ನು ಪ್ರಸ್ತುತ ಒಡಂಬಡಿಕೆಯ ನಿಬಂಧನೆಗಳ ಟಿಪ್ಪಣಿ ಯಾ ಯಾವುದೇ ರೀತಿಯಲ್ಲಿ ಆ ಒಪ್ಪಂದದಲ್ಲಿ ಒದಗಿಸಿರುವ ನಿಬಂಧನೆಗಳಿಗೆ ಪರ್ಯಾಯವೆಂದು ಪರಿಗಣಿಸಲಾಗದು. ಈ ಕೈಪಿಡಿಯು ಒಡಂಬಡಿಕೆಯ ಆಶಯಗಳು, ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆ (ಇಂಟರ್ ನೇಶನಲ್ ಲೇಬರ್ ಆರ್ಗನೈಷೇಶನ್ - ಐ.ಎಲ್. ಒ.) ಮತ್ತು ಅಂತಾರಾಷ್ಟೀಯ ಕಾರ್ಮಿಕ ಸಮ್ಮೇಳನ (ಇಂಟರ್ ನೇಶನಲ್ ಲೇಬರ್ ಕಾನ್ಫರೆನ್ಸ್ ಐ.ಎಲ್. ಸಿ.) ಗಳ ಕಾರ್ಯವೈಖರಿಯ ಪರಿಚಯವಿಲ್ಲದವರಿಗೆ ಸಹಾಯ ಮಾಡುವ ಮತ್ತು ತನ್ಮೂಲಕ ಅದಕ್ಕೆ ಸಂಬಂಧಿಸಿದ ಪ್ರಮುಖ ವಿಚಾರಗಳ ಅರಿವು ಮೂಡಿಸುವ ಧ್ಯೇಯ ಹೊಂದಿದೆ. ಅದರಲ್ಲೂ ಮುಖ್ಯವಾಗಿ ಮೀನುಗಾರಿಕೆಯಲ್ಲಿ ನಿರತರಾಗಿರುವ ಕಾರ್ಮಿಕ ವರ್ಗ ಮತ್ತು ಅವರ ಸಂಘಟನೆಗಳಿಗೆ ಮತ್ತು ಮುಂದುವರಿಯುತ್ತಿರುವ ದೇಶಗಳಲ್ಲಿನ ಮೀನುಗಾರಿಕೆಯೇ ಕುಲಕಸಬಾಗಿರುವ ಸಾಂಪ್ರದಾಯಿಕ ಮತ್ತು ಚಿಕ್ಕ ಪುಟ್ಟ ಸ್ತರದ ಮೀನುಗಾರರಿಗೆ ಪ್ರಸ್ತುತ ಒಪ್ಪಂದದಿಂದಾಗಬಹುದಾದ ಪ್ರಯೋಜನಗಳು ಮತ್ತು ಪರಿಣಾಮಗಳು ಇವುಗಳ ತಿಳುವಳಿಕೆ ನೀಡುವುದಾಗಿದೆ.

ಈ ಕೈಪಿಡಿಯು ಅಂತರ್ಜಾಲ icsf.net ದಲ್ಲಿ ಲಭ್ಯವಿದೆ

ಐ.ಎಸ್.ಬಿ.ಎನ್ : 978-93-80802-13-8

www.icsf.net